ಬೆಂಗಳೂರಿನ ಸುಪ್ರಸಿದ್ಧ ಸಂಗೀತ ಸಭೆ "ಗಾಯನಸಮಾಜ"ದ ಹೆಸರನ್ನು ಕೇಳದವರಿಲ್ಲ. ಈ ಸಮಾಜದ ೨೫ನೇ ಸಂಗೀತ ಸಮ್ಮೇಳನ "ಪಿಟೀಲು ವೈಭವ" ಎಂಬ ಶೀರ್ಷಿಕೆಯಲ್ಲಿ ನಡೆಯಿತು. ಪಿಟೀಲು ವಾದ್ಯದ ಹುಟ್ಟು, ಬೆಳವಣಿಗೆ, ಆ ವಾದ್ಯವಾದನದಲ್ಲಿನ ಪರಿಣತರು ಇತ್ಯಾದಿ ಅಂಶಗಳನ್ನೆಲ್ಲಾ ಮುಖ್ಯವಾಗಿಸಿ, ಒಟ್ಟಾರೆ ಪಿಟೀಲನ್ನು ಕೇಂದ್ರವಾಗಿಸಿಕೊಂಡು ಅದರ ಸುತ್ತ ಹೆಣೆಯಲ್ಪಟ್ಟ ಅಂಶಗಳನ್ನೇ ಪ್ರಧಾನವಾಗಿಸಿ ಪ್ರಬಂಧವಾಚನ, ಪ್ರಾತ್ಯಕ್ಷಿಕೆ ಇತ್ಯಾದಿಗಳು ನಡೆದವು. ಈ ಸಂದರ್ಭದಲ್ಲಿ ಸುಪ್ರಸಿದ್ಧರಾದ ವಿದ್ವಾಂಸರನ್ನೇ ಅಲ್ಲದೆ ಹೆಚ್ಚು ಪ್ರಕಾಶಕ್ಕೆ ಬಾರದ ಕಲಾವಿದರನ್ನೂ ಗುರುತಿಸಲಾಗಿದ್ದಿತು. ಈ ಸಾಲಿನಲ್ಲಿ ಬರುವ ಒಬ್ಬ ಕಲಾವಿದರೇ ಕರ್ನಾಟಕದ ಆಲಗೂಡು ವೆಂಕಟಸುಬ್ಬಯ್ಯನವರು. ಗಾಯನ ಸಮಾಜದ ಸಮ್ಮೇಳನಾಧ್ಯಕ್ಷರಾಗಿದ್ದ ಪದ್ಮಶ್ರೀ ಲಾಲ್‌ಗುಡಿ ಜಿ.ಜಯರಾಮನ್‌ರವರು ಅಧ್ಯಕ್ಷ ಭಾಷಣ ಮಾಡುತ್ತಾ 'ಪೋಡದ ಮರೆಯಲ್ಲಿನ ಇಂಥ ದಿವ್ಯ ತೇಜಗಳನ್ನು ನೋಡಬೇಕೆಂಬ ಆಸೆಯಾಗುತ್ತದೆ' ಎಂದು ತಮ್ಮ ಆಶಯವನ್ನು ವ್ಯಕ್ತಪಡಿಸಿದರು. ಆದರೆ ಅದು ಅವರೊಬ್ಬರ ಆಸೆಯಲ್ಲ. ಸಂಗೀತಕಲಾ ಪ್ರಿಯರೆಲ್ಲರ ಮಹದಾಶೆಯೇ ಸರಿ. ಅದು ಈಗ ಈ ಲೋಕದಲ್ಲಿ ಪೂರೈಸಲಾಗದ್ದಲ್ಲವೇ ? ಆದ್ದರಿಂದ ಅಂಥವರನ್ನು ಈ ಮೂಲಕ ಸ್ಮರಿಸಿ ಅದೇ ಪುಣ್ಯಕಾರ್ಯವೆಂದು ಪರಿಗಣಿಸಬೇಕಾಗಿದೆ. ಅಂತಹ ಒಂದು ಪ್ರಯತ್ನ ಈ ಬರಹದಲ್ಲಿ ಮೂಡಿಬಂದಿದೆ. ಇದೇ ಲೇಖಕಿಯ ಮಹಾ ಪ್ರಬಂಧ "ಶ್ರೀ ತ್ಯಾಗರಾಜರ ಕೃತಿಗಳಲ್ಲಿ ಸಂಗೀತ ಮತ್ತು ಭಕ್ತಿ" ಎಂಬ ಕೃತಿ ಸದ್ಯದಲ್ಲಿಯೇ ಪ್ರಕಟಣೆಯಾಗಲಿದೆ.

ಸುವಿದ್ಯಾ ಪ್ರಕಾಶನ :: ಬೆಂಗಳೂರು ೫೬೦ ೦೧೯

ಪಿಟೀಲು ವಿದ್ವಾನ್

ವೆಂಕಟಸುಬ್ಬಯ್ಯ

ಡಾ|| ಟಿ.ಎನ್. ಪದ್ಮ

VIOLIN MAESTRO VENKATASUBBAIAH- (A Brief Sketch) by Dr. T.N. Padma, M. Music, B.Ed., Ph.D ; Published by Suvidya Prakashana, 3, First Cross, Ramakrishna Layout, Kempegowdanagar Bangalore-560 019; First Published 1998; Pages x + 24 ; Price Rs. 10.

ಪ್ರಥಮ ಮುದ್ರಣ ೧೯೯೮

© ಲೇಖಕಿಯವರದು

ಬೆಲೆ : ಹತ್ತು ರೂಪಾಯಿ

ಅಕ್ಷರ ವಿನ್ಯಾಸ : ಶ್ರೀ ಸದ್ಗುರು ಎಂಟರ್‌ಪ್ರೈಸಸ್, ರಾಮಾನುಜ ರಸ್ತೆ, ಮೈಸೂರು.
ದೂರವಾಣಿ : 442655

ಮುದ್ರಣ : ಶ್ರೀ ಸದ್ಗುರು ಪ್ರಿಂಟರ್ಸ್, ರಾಮಾನುಜ ರಸ್ತೆ, ಮೈಸೂರು.
ದೂರವಾಣಿ : 442655

ಪಿಟೀಲು ವಿದ್ವಾನ್
ವೆಂಕಟಸುಬ್ಬಯ್ಯ

ಮುನ್ನುಡಿ

ಸುಮಾರು ೭೫ ವರ್ಷಗಳ ಹಿಂದೆ, ನಾನು ಚಿಕ್ಕಹುಡುಗನಾಗಿದ್ದಾಗ, ಮನೆಯಲ್ಲಿ ಪಾಠ ಹೇಳಿಕೊಡಲು ಒಬ್ಬ ಮೇಷ್ಟರನ್ನು ಗೊತ್ತುಮಾಡಿದ್ದರು. ಅವರು ನಮ್ಮ ಮನೆಗೆ ಹತ್ತಿರವೇ ಒಂದು ಕೊಠಡಿಯಲ್ಲಿ ವಾಸವಾಗಿದ್ದರು. ಆ ಕೊಠಡಿ ನಂಜನಗೂಡಿನ ರಥಬೀದಿಯ ಚಿಕ್ಕ ಆಚಾರ್ಯರ ಮನೆಯ ಜಗುಲಿಯ ಮೇಲಿತ್ತು. ಅಲ್ಲಿ ನಮ್ಮ ಮೇಷ್ಟರು ನರಸಿಂಹಮೂರ್ತಿ ಮತ್ತು ಅವರ ಅಣ್ಣ ಶ್ರೀನಿವಾಸಮೂರ್ತಿ ಇಬ್ಬರೂ ವಾಸವಾಗಿದ್ದರು. ನಮ್ಮ ಮನೆಯಲ್ಲಿ ಬೆಳಗಿನ ಹೊತ್ತು ಸ್ವಲ್ಪ ಗದ್ದಲವಿದ್ದುದರಿಂದ ನಾನು ಮೇಷ್ಟರ ಕೊಠಡಿಗೇ ಹೋಗಿ ಪಾಠ ಹೇಳಿಸಿಕೊಂಡು ಬರುತ್ತಿದ್ದೆ. ಒಂದೊಂದು ದಿವಸ ಇಬ್ಬರೂ ಬೀಗಹಾಕಿಕೊಂಡು ಎಲ್ಲಿಯೋ ಹೋಗಿದ್ದರೆ ಬರುವವರೆಗೂ ಕಾಯುತ್ತಾ ಹೊರಗಡೆ ಕುಳಿತಿರುತ್ತಿದ್ದೆ.

ಒಂದು ದಿನ ಹೀಗೆಯೇ ಪಾಠಕ್ಕೆ ಹೋಗಿದ್ದಾಗ ಬಾಗಿಲು ಮುಚ್ಚಿತ್ತು. ಆದರೆ ಒಳಗಿನಿಂದ ಚಿಲಕ ಹಾಕಿರಲಿಲ್ಲ. ಒಳಗಡೆಯಿಂದ ನಾದ ಕೇಳಿ ಬರುತ್ತಿತ್ತು. ನನಗೆ ಆಶ್ಚರ್ಯ ಮತ್ತು ಕುತೂಹಲ. ಮೆಲ್ಲನೆ ಬಾಗಿಲನ್ನು ನೂಕಿದೆ. ಒಳಗಡೆ ಯಾರೋ ಕುಳಿತು ಪಿಟೀಲನ್ನು ನುಡಿಸುತ್ತಿದ್ದರು. ಅವರನ್ನು ನಾನೆಂದೂ ನೋಡಿರಲಿಲ್ಲ. ಬಾಗಿಲು ಸ್ವಲ್ಪ ತಳ್ಳಿ ಹಾಗೆಯೇ ನಿಂತು ಅವರನ್ನು ನೋಡುತ್ತಿದ್ದೆ. ಅವರು ಒಂದು ಸಲ ತಲೆಯೆತ್ತಿ ನೋಡಿದರು. ಆದರೆ ಏನೂ ಹೇಳಲಿಲ್ಲ. ಅವರಪಾಡಿಗೆ ಪಿಟೀಲನ್ನು ನುಡಿಸಿಕೊಂಡು ಹೋಗುತ್ತಿದ್ದರು. ಒಳಗೆ ಹೋಗಿ ಕೂತುಕೊಂಡೆ. ಆಗಲೂ ಏನೂ ಮಾತಾಡಲಿಲ್ಲ. ನುಡಿಸಿಕೊಂಡು ಹೋಗುತ್ತಿದ್ದರು. ಸ್ವಲ್ಪ ಸಮಯದ ಅನಂತರ ನನ್ನ ಮೇಷ್ಟ್ರು ಮತ್ತು ಅವರ ಅಣ್ಣ ಇಬ್ಬರೂ ಬಂದರು. ಅವರನ್ನು ನೋಡಿ ಪಿಟೀಲನ್ನು ಕೆಳಗಿಟ್ಟು 'ಶೀನೂ, ನಾನು ಸ್ನಾನಮಾಡಿಕೊಂಡು ಬರುತ್ತೇನೆ' ಎಂದು ಹೇಳಿ ಹೊರಟುಹೋದರು. ಅವರು ಯಾರೆಂಬುದು ತಿಳಿಯಬೇಕೆಂಬ ಕುತೂಹಲ. ಆದರೆ ಮೇಷ್ಟ್ರನ್ನ ಕೇಳುವುದಕ್ಕೆ ಭಯ.

ಆಗ ಗಣಪತಿ ಹಬ್ಬದಂದು ನಮ್ಮ ಊರಿನ ಸಂಸ್ಕೃತ ಪಾಠಶಾಲೆಯಲ್ಲಿ ದೊಡ್ಡ ವಿದ್ಯಾಗಣಪತಿಯನ್ನು ಕೂರಿಸಿ ಒಂಭತ್ತು ದಿನಗಳು ಸಾಯಂಕಾಲ

ಗಮಕವಾಚನ ಅನಂತರ ಮಂಗಳಾರತಿ ಪ್ರಸಾದವಿನಿಯೋಗ ಮುಂತಾದವು ನಡೆಯುತ್ತಿದ್ದವು. ಸಂಜೆ ನಮ್ಮ ತಂದೆಯವರು ಈ ಸಮಾರಂಭಕ್ಕೆ ನನ್ನನ್ನು ಕರೆದುಕೊಂಡು ಹೋಗಿದ್ದರು. ಅಲ್ಲಿ ಯಾರೋ ಹಿರಿಯರು ಪಾಠಶಾಲೆಯ ಪಂಡಿತರನ್ನು ಕರೆದು 'ಬರೀ ಗಮಕ, ಭಜನೆ ಆಗುತ್ತಾ ಇದೆಯಲ್ಲ, ಆ ನರಸೀಪುರದ ವೆಂಕಟಸುಬ್ಬಯ್ಯ ಬಂದಿದ್ದನಲ್ಲ ; ಅವನಿಂದ ಪಿಟೀಲು ಕಚೇರಿ ಮಾಡಿಸಬಹುದಾಗಿತ್ತಲ್ಲ' ಅಂದರು. ಅದಕ್ಕೆ ಪಂಡಿತರು 'ಅವರು ಮೊನ್ನೆಯೇ ಊರಿಗೆ ಹೊರಟುಹೋದರು' ಎಂದರು. ಈ ಮಾತುಗಳಿಂದ ಆ ಪಿಟೀಲು ವಾದಕರ ಹೆಸರು ವೆಂಕಟಸುಬ್ಬಯ್ಯ ಎಂದೂ ಅವರು ನರಸೀಪುರದವರೆಂದೂ ತಿಳಿಯಿತು.

ಮುಂದೆ ಒಂದೆರಡು ದಶಕಗಳ ಕಾಲ ವೆಂಕಟಸುಬ್ಬಯ್ಯನವರು ಮರೆತು ಹೋದರು. ಪುನಃ ಅವರ ನೆನಪು ಬಂದುದು ಮೈಸೂರಿನಲ್ಲಿ. ಆಗ ಆಸ್ಥಾನ ವಿದ್ವಾನ್ ಚಿಕ್ಕರಾಮರಾಯರ ಬಳಿ ಸಂಗೀತಾಭ್ಯಾಸ ಮಾಡುತ್ತಿದ್ದೆ. ಆದುದರಿಂದ ಅನೇಕ ಸಂಗೀತವಿದ್ವಾಂಸರನ್ನು ನೋಡುವುದು ಅಥವಾ ಅವರ ಹೆಸರುಗಳನ್ನು ಕೇಳುವ ಸಂದರ್ಭಗಳು ಬರುತ್ತಿದ್ದವು. ಅವರಲ್ಲಿ ಒಬ್ಬರು ಎನ್.ಚೆನ್ನಕೇಶವಯ್ಯನವರು. ನಾನಿದ್ದ ಬೀದಿಯಲ್ಲೇ ವಾಸವಾಗಿದ್ದರು. ಏನಾದರೂ ಸಂದೇಹಬಂದಾಗ ತಿಳುವಳಿಕೆಗಾಗಿ ಅವರ ಬಳಿ ಹೋಗುತ್ತಿದ್ದೆ. ಅವರು ಒಂದು ದಿನ ಪಿಟೀಲು ವಾದ್ಯದ ಪ್ರಸ್ತಾಪ ಬಂದಾಗ, 'ನರಸೀಪುರದ ವೆಂಕಟಸುಬ್ಬಯ್ಯ ಅಂತ ಇದಾರೆ. ಅದ್ಭುತವಾಗಿ ಪಿಟೀಲು ನುಡಿಸುತ್ತಾರೆ' ಎಂದರು. ಇನ್ನೊಂದು ದಿನ ಚೆನ್ನಕೇಶವಯ್ಯನವರ ಮನೆಗೆ ಹೋಗಿದ್ದಾಗ, ಅವರ ಗುರುಗಳಾದ ಆಸ್ಥಾನವಿದ್ವಾನ್ ವಾಸುದೇವಾಚಾರ್ಯರು ಅಲ್ಲಿಗೆ ಬಂದರು. ಯಾರ್ಯಾರದೋ ವಿಷಯ ಮಾತನಾಡುತ್ತಿದ್ದಾಗ ವೆಂಕಟಸುಬ್ಬಯ್ಯನವರ ಹೆಸರು ಬಂದಿತು. ಆಗ ಆಚಾರ್ಯರು, 'ಅವನಿಗೆ ಅಪಾರವಾದ ವಿದ್ಯೆ ಇದೆ - ಆದರೆ ಅದೃಷ್ಟವಿಲ್ಲ. ಅವನಿಗೆ ಅದು ಬೇಕೂ ಇಲ್ಲ. ಜೊತೆಗೆ ಒಂದು ರೀತಿಯ ಅಧೈರ್ಯ ಬೇರೆ. ಅವನೇನಾದರೂ ಪಿಟೀಲನ್ನೇ ಕಸುಬಾಗಿ ಮಾಡಿಕೊಂಡಿದ್ದರೆ, ಕಣಿವೆ ಕೆಳಗಿನ ಅನೇಕ ಪಿಟೀಲಿನವರನ್ನ ಮೀರಿಸ್ತಿದ್ದ' ಎಂದರು. ಮರೆತು ಹೋಗಿದ್ದ ವೆಂಕಟಸುಬ್ಬಯ್ಯನವರ ಹೆಸರು ಮರುಕಳಿಸಿತು. ತಿರುಗಿ ಅದು ಎದ್ದು ಕಂಡದ್ದು ನಾನು ಬೆಂಗಳೂರಿಗೆ ಬಂದಮೇಲೆ.

ಬೆಂಗಳೂರಿನಲ್ಲಿ ನನ್ನ ಮಿತ್ರರಾದ ಎನ್.ಎಸ್.ಸೀತಾರಾಮಶಾಸ್ತ್ರಿಗಳು "ಜನಪ್ರಗತಿ" ವಾರಪತ್ರಿಕೆಯ ಸಂಪಾದಕರಾಗಿದ್ದರು. ಅವರು ತಿರುಮಕೂಡ್ಲು ನರಸೀಪುರದವರು. ಒಮ್ಮೆ ಯಾವುದೋ ಸಂಗೀತಗಾರರ ಪ್ರಸ್ತಾಪಬಂದಾಗ ಅವರು "ಭಿಕ್ಷಾನ್ನದ ಶಾಮಣ್ಣ"ನವರ ಹೆಸರನ್ನು ಹೇಳಿದರು ಮತ್ತು ಅವರ ವಿಚಿತ್ರ ಸ್ವಭಾವವನ್ನೂ ವರ್ಣಿಸಿದರು. ಶಾಮಣ್ಣನವರನ್ನು ಅವರು ನೋಡಿದ್ದರು. ಆ ವೇಳೆಗಾಗಲೇ ನಾನು ಮಾಸ್ತಿಯವರ "ಸುಬ್ಬಣ್ಣ" ಕಾದಂಬರಿಯನ್ನು ಓದಿದ್ದುದರಿಂದ ನನಗೆ ಶಾಮಣ್ಣನವರ ಬಗೆಗೆ ಕುತೂಹಲ ಉಂಟಾದುದು ಸಹಜ. ಆದರೆ ಶಾಸ್ತ್ರಿಗಳು ವೆಂಕಟಸುಬ್ಬಯ್ಯನವರ ಪ್ರಸ್ತಾಪ ಮಾಡಿರಲಿಲ್ಲ. ಜೊತೆಗೆ ಮಾಸ್ತಿಯವರ ಸುಬ್ಬಣ್ಣ ಕಾದಂಬರಿಯಲ್ಲಿಯೂ ಅವರ ಹೆಸರಿಲ್ಲ. ಶಾಮಣ್ಣನವರ ಶಿಷ್ಯನ ಪ್ರಸ್ತಾಪವಿದೆ. ಈ ಮಧ್ಯೆ ಒಂದುಸಲ ಸುಪ್ರಸಿದ್ಧ ಪಿಟೀಲು ವಿದ್ವಾಂಸ ಮೈಸೂರು ಟಿ.ಚೌಡಯ್ಯನವರ ಬಳಿ ಮಾತನಾಡುತ್ತಿದ್ದಾಗ ಹೇಳಿದರು - "ಆ ವೆಂಕಟಸುಬ್ಬಯ್ಯ ಏನಾದರೂ ನಮ್ಮ ಜೊತೆಗೆ ಈ ಪಿಟೀಲು ವೃತ್ತಿಗೆ ಬಂದಿದ್ದರೆ ನಮ್ಮಲ್ಲಿ ಅನೇಕರನ್ನು ಆಪೋಶನ ತೊಗೊಳ್ತಿದ್ರು. ಅದೆಂಥಹ ನಾದ ! ಅದೆಂಥಹ ಬಿಗಿ ! ಅದೆಂಥಹ ಅಚ್ಚುಗಟ್ಟು!" ಹೀಗೆ ವರ್ಣಿಸುತ್ತಾ ಹೋದರು. ಆಗ ನನಗೆ ನಾನು ಪಾಠ ಹೇಳಿಸಿಕೊಳ್ತಿದ್ದ ಕೊಠಡೀಲಿ ನೋಡ್ತಿದ್ದ ವೆಂಕಟಸುಬ್ಬಯ್ಯನವರೂ, ಈ ವಿದ್ವಾಂಸರು ಹೊಗಳುತ್ತಾ ಇದ್ದ ವೆಂಕಟಸುಬ್ಬಯ್ಯನವರೂ ಒಬ್ಬರೇ ಎಂಬುದು ಖಚಿತವಾಯಿತು. ಅಲ್ಲದೆ ಅವರ ಬಗೆಗೆ ಇನ್ನೂ ಹೆಚ್ಚು ವಿಷಯ ತಿಳಿದುಕೊಳ್ಳಬೇಕೆಂಬ ಆಸೆಯೂ ಅಂಕುರಿಸಿತು.

ಸ್ವಲ್ಪ ವರುಷಗಳ ನಂತರ ಆ ಸಂದರ್ಭವೂ ಒದಗಿ ಬಂದಿತು ; ಅದು "ಕೆಲವು ನೆನಪುಗಳು" ಎಂಬ ಪುಸ್ತಕವನ್ನು ಓದಿದಾಗ. ಅದನ್ನು ಬರೆದ ನವರತ್ನ ರಾಮರಾಯರು ಮಾಸ್ತಿಯವರ ಸುಬ್ಬಣ್ಣ ಕಾದಂಬರಿಗೆ ಮೂಲ ಸಾಮಗ್ರಿಯನ್ನು ಒದಗಿಸಿದವರು. ಅವರ ಪುಸ್ತಕದಲ್ಲಿ ಭಿಕ್ಷಾನ್ನ ಶಾಮಣ್ಣ ಹಾಗೂ ಅವರ ಶಿಷ್ಯ ಆಲಗೂಡು ವೆಂಕಟಸುಬ್ಬಯ್ಯ - ಈ ಇಬ್ಬರ ವಿಷಯವನ್ನು ಸಾಕಷ್ಟು ಪ್ರಮಾಣದಲ್ಲಿ ಚಿತ್ರಿಸಿದ್ದಾರೆ.

ಈ ಇಬ್ಬರ ಸಂಪರ್ಕವೂ ಇತ್ತು ಅವರಿಗೆ. ನವರತ್ನ ರಾಮರಾಯರ ನೆನಪುಗಳನ್ನು ಓದಿದ ಮೇಲೆಯೇ ನನಗೆ ನರಸೀಪುರದ ವೆಂಕಟ

ಸುಬ್ಬಯ್ಯನವರೇ ಆಲಗೂಡು ವೆಂಕಟಸುಬ್ಬಯ್ಯ ಎಂಬ ಹೆಸರಿದ್ದವರು ಎಂದು ತಿಳಿದದ್ದು. ೧೯೬೯ ರಲ್ಲಿ ಕರ್ನಾಟಕ ಗಾನಕಲಾ ಪರಿಷತ್ತು ಸ್ಥಾಪನೆಯಾದ ಅನಂತರ ಕರ್ನಾಟಕ ಸಂಗೀತ ಪರಂಪರೆಯ ಬಗೆಗೆ ವಿಷಯ ಸಂಗ್ರಹ ಮಾಡುವ ಪ್ರಯತ್ನಗಳು ಪ್ರಾರಂಭವಾದವು. ಅದರಲ್ಲಿ ಪ್ರಸಿದ್ಧರೇ ಅಲ್ಲದೆ ಅಪ್ರಸಿದ್ಧ, ಅಜ್ಞಾತ ಕಲಾವಿದರ ಬಗೆಗೆ ವಿಷಯ ಸಂಗ್ರಹ ಮಾಡುವ ಯತ್ನ ನಡೆಯುತ್ತಿತ್ತು. ಈ ಸಂದರ್ಭದಲ್ಲಿ ಆಲಗೂಡು ವೆಂಕಟಸುಬ್ಬಯ್ಯನವರ ನೆನಪು ಆಗಾಗ ಬರುತ್ತಿತ್ತು. ಆದರೆ ಬದುಕಿದ್ದಾರೆಯೋ ಇಲ್ಲವೋ ಎಂಬ ಸಂದೇಹವೂ ಬರುತ್ತಿತ್ತು.

ಈ ಮಧ್ಯೆ ಒಂದು ಸಲ ಶೇಷಾದ್ರಿಪುರದ ರಾಮೋತ್ಸವ ಕಚೇರಿಗೆ ಹೋಗಿದ್ದಾಗ ಯಾವಯಾವುದೋ ಮಾತಿನ ಮಧ್ಯೆ ವೆಂಕಟಸುಬ್ಬಯ್ಯನವರ ಪ್ರಸ್ತಾಪ ಬಂದಿತು. ಆಗ ಉತ್ಸವಸಮಿತಿಯ ಹಿರಿಯ ಸದಸ್ಯರಾದ 'ಕಲ್ಯಾಣ ಕೆಫೆ' ನರಸಿಂಹಮೂರ್ತಿಯವರು ಕುಳಿತಿದ್ದರು. ನನ್ನ ಜೊತೆಯಲ್ಲಿ ಮಾತನಾಡುತ್ತಿದ್ದವರು 'ಅವರನ್ನು ಕೇಳಿದರೆ ಗೊತ್ತಾಗಬಹುದು' ಎಂದರು.

ಅವರಿಂದ ವೆಂಕಟಸುಬ್ಬಯ್ಯನವರ ಅಳಿಯಂದಿರಾದ ಮೈಸೂರುವಾಸಿ ಹನುಮಂತರಾಯರ ವಿಳಾಸವನ್ನು ಪಡೆದೆ. ಮೈಸೂರಿಗೆ ಹೋದಾಗ ಅವರ ಮನೆಗೆ ಹೋಗಿ ವಿಷಯ ಸಂಗ್ರಹ ಮಾಡಬೇಕೆಂದುಕೊಂಡೆ. ಅಲ್ಲಿಂದಾಚೆಗೆ ಮೈಸೂರಿಗೆ ಹತ್ತುಹನ್ನೆರಡು ಸಲ ಹೋಗಿದ್ದೇನೆ. ಆದರೆ ಹನುಮಂತರಾಯರ ಮನೆಗೆ ಹೋಗಲು ಆಗಿಲ್ಲ. ಇದಕ್ಕೆ ಮುಖ್ಯಕಾರಣವೆಂದರೆ, ಮೈಸೂರಿಗೆ ಪ್ರಯಾಣಮಾಡುವುದು ಯಾವುದೋ ಸಮಾರಂಭ ಸಂದರ್ಭದಲ್ಲಿ. ಆಗ ಆ ಊರಿನಲ್ಲಿ ಮಾಡಬೇಕೆಂದು ಐದಾರುಕಾರ್ಯಗಳನ್ನು ಜೊತೆಗೂಡಿಸಿಕೊಂಡು ಹೊರಡುವುದು, ಆದರೆ ಅವುಗಳಲ್ಲಿ ಒಂದೋ ಎರಡೋ ಮಾತ್ರ ಮಾಡಲು ಸಾಧ್ಯ. ಮಿಕ್ಕವು ಹಾಗೆಯೇ ಉಳಿದುಕೊಳ್ಳುವುವು. ಹನುಮಂತರಾಯರನ್ನು ಭೇಟಿ ಮಾಡುವ ಕೆಲಸವನ್ನೇ ಹಚ್ಚಿಕೊಂಡು ಪ್ರತ್ಯೇಕವಾಗಿ ಮೈಸೂರಿಗೆ ಹೋಗಬೇಕಾಗಿತ್ತು, ಆದರೆ ಅದು ಸಾಧ್ಯವಾಗದೆ ನಿಂತಿತು.

೧೯೭೦ರಲ್ಲಿ ಬೆಂಗಳೂರು ಗಾಯನ ಸಮಾಜದ ಸಂಗೀತ ಸಮ್ಮೇಳನ ಬಂದಿತು. ಅದಕ್ಕೆ ಅಧ್ಯಕ್ಷರು ಖ್ಯಾತ ಪಿಟೀಲು ವಿದ್ವಾನ್ ಲಾಲ್‌ಗುಡಿ ಜಯರಾಮನ್. ಪಿಟೀಲು ವಾದಕ ಅಧ್ಯಕ್ಷರಾದ ಪ್ರಯುಕ್ತ, ಸಮ್ಮೇಳನದ

ಪ್ರಾತಃಕಾಲದ ವಿದ್ವತ್‌ಗೋಷ್ಠಿ ಕಾರ್ಯಕ್ರಮಗಳಲ್ಲಿ ಹಿಂದಿನ ಪಿಟೀಲು ವಾದಕರ ಬಗೆಗೆ ಪ್ರಬಂಧವಾಚನಗಳು ಏರ್ಪಾಡಾಗಿದ್ದವು. ಅದರಲ್ಲಿ ಕರ್ನಾಟಕದ ಪಿಟೀಲು ವಾದಕರ ಬಗೆಗೆ ಪ್ರಬಂಧ ಮಂಡಿಸಲು ಮೈಸೂರು ವಿಶ್ವವಿದ್ಯಾನಿಲಯದ ಲಲಿತಕಲೆಗಳ ಮಹಿಳಾ ಕಾಲೇಜಿನ ಡಾ|| ಟಿ.ಎನ್.ಪದ್ಮ ಅವರನ್ನು ಆಹ್ವಾನಿಸಲಾಗಿತ್ತು. ಅವರು ಪ್ರಬಂಧದ ವಿಷಯದಲ್ಲಿ ನನ್ನ ಸಲಹೆ ಕೇಳಿದಾಗ ನಾನು ಹನುಮಂತರಾಯರ ವಿಳಾಸವನ್ನು ಕೊಟ್ಟು ಅವರ ಸಹಕಾರ ದಿಂದ ಆ ಪ್ರಬಂಧದಲ್ಲಿ ಆಲಗೂಡು ವೆಂಕಟಸುಬ್ಬಯ್ಯನವರ ಬಗೆಗೆ ದೊರೆಯುವಷ್ಟೂ ಮಾಹಿತಿಯನ್ನು ಸೇರಿಸಬೇಕೆಂದು ಸಲಹೆ ಮಾಡಿದೆ. ಅದರಂತೆ ಅವರು ಹನುಮಂತರಾಯರ ಮನೆಗೆ ಹೋಗಿ ಅಲ್ಲಿಯವರಿಂದ ದೊರೆತಷ್ಟು ವಿಷಯ ಸಂಗ್ರಹಮಾಡಿ ಪ್ರಬಂಧದಲ್ಲಿ ಸೇರಿಸಿದ್ದಾರೆ.

ಅಂತೂ ೭೫ ವರ್ಷಗಳ ಹಿಂದೆ ಮೊದಲು ನೋಡಿದ್ದ (ಅದು ಒಂದೇ ಸಲ ಮೊದಲು ಮತ್ತು ಕಡೆ) ಈ ಪ್ರತಿಭಾವಂತ ಪಿಟೀಲು ವಿದ್ವಾಂಸ ವೆಂಕಟ ಸುಬ್ಬಯ್ಯನವರ ಜೀವನ ಮತ್ತು ವ್ಯಕ್ತಿತ್ವ ಪೂರ್ಣಪರಿಚಯವಾಗಬೇಕಾದರೆ ಹಂತಹಂತವಾಗಿ ಏಳು ದಶಕಗಳಿಗೂ ಮೇಲಾಯಿತು. ತಾಳ್ಮೆಯಿಂದ ಮತ್ತು ಶ್ರದ್ಧೆಯಿಂದ ವಿಷಯ ಸಂಗ್ರಹಮಾಡಿ ಈ ಕಿರುಹೊತ್ತಿಗೆಯನ್ನು ರಚಿಸಿದ್ದಾರೆ, ಡಾ|| ಪದ್ಮ. ಸಂಗೀತ ಕ್ಷೇತ್ರದಲ್ಲಿ ಕರ್ನಾಟಕದ ಸ್ಥಾನವೇನು, ಅದರ ಕೊಡುಗೆ ಏನು ಎಂಬುದು ತಿಳಿಯಬೇಕಾದರೆ ಇಂತಹ ಪುಸ್ತಕಗಳು ಅಗತ್ಯ. ಡಾ|| ಪದ್ಮರವರು ಇದೇ ರೀತಿ ಕರ್ನಾಟಕದ ಇತರ ಪರಿಚಿತ ಹಾಗೂ ಅಜ್ಞಾತ ಸಂಗೀತ ವಿದ್ವಾಂಸರ ಬಗೆಗೂ ವಿಷಯ ಸಂಗ್ರಹಮಾಡಿ ಪುಸ್ತಕ ರೂಪದಲ್ಲಿ ಜನತೆಗೆ ತಲುಪಿಸಲಿ, ಈ ಕಾರ್ಯದಲ್ಲಿ ಸಂಗೀತ ವಿದ್ವಾಂಸರು ಮತ್ತು ಕಲಾಭಿಮಾನಿಗಳು ಸಹಕರಿಸಲಿ ಎಂದು ಬಿನ್ನವಿಸುತ್ತೇನೆ.

೧೦-೦೨-೧೯೯೮

ಬಿ.ವಿ.ಕೆ.ಶಾಸ್ತ್ರಿ

ಲೇಖಕಿಯ ನುಡಿ

ಈ ಕಿರುಹೊತ್ತಿಗೆಯ ರಚನೆಗೆ ಮೂಲಪ್ರೇರಕರು ಸಂಗೀತ ಕಲಾರತ್ನ, ಕಲಾ ವಿಮರ್ಶಕ ಶ್ರೀ ಬಿ.ವಿ.ಕೆ.ಶಾಸ್ತ್ರಿಯವರು. ಪೂಜ್ಯ ಶ್ರೀ ಬಿ.ವಿ.ಕೆ. ಶಾಸ್ತ್ರಿ ಯವರು ಒಂದು ಸಂದರ್ಭದಲ್ಲಿ, ಪಿಟೀಲು ವಾದನದಲ್ಲಿ ಅದ್ವಿತೀಯ ವಿದ್ವಾಂಸರಾಗಿದ್ದ, ಆದರೆ ಹೆಚ್ಚು ಪ್ರಚಾರಕ್ಕೆ ಬಾರದ "ವೆಂಕಟಸುಬ್ಬಯ್ಯ" ನವರ ಬಗೆಗೆ ತಿಳಿಯುವಂತೆ ನನಗೆ ಸೂಚಿಸಿದರು. ಅಲ್ಲದೆ ಈ ಬಗೆಗೆ ಮಾಹಿತಿ ಲಭ್ಯವಾಗುವ ಸ್ಥಳವನ್ನೂ ತೋರಿದರು. ಆ ಸ್ಥಳವೇ ವೆಂಕಟಸುಬ್ಬಯ್ಯನವರ ಮಗಳ ಮನೆ. ಈ ಕಾರ್ಯಾರ್ಥವಾಗಿ ನಾನು ಅವರಲ್ಲಿಗೆ ಹೋದೆ. ನಾನು ಆ ಮನೆಯವರಿಗೆ ಅಪರಿಚಿತಳಾಗಿದ್ದರೂ ಬಹಳ ವಿಶ್ವಾಸದಿಂದ ನನ್ನನ್ನು ಅವರು ಬರಮಾಡಿಕೊಂಡರು. ವೆಂಕಟಸುಬ್ಬಯ್ಯನವರ ಬಗೆಗೆ ಅಗತ್ಯ ಮಾಹಿತಿ ಗಳನ್ನೂ ನೀಡಿದರು. ಮಾಹಿತಿ ನೀಡುವಲ್ಲಿ ಆಕೆಯ ಪತಿ ಶ್ರೀ ಹನುಮಂತ ರಾಯರೂ ಹಾಗೂ ಮನೆಯಲ್ಲಿನ ಇತರರೂ ಉತ್ಸಾಹದಿಂದ ಪಾಲ್ಗೊಂಡು ಸಹಕರಿಸಿದರು. ಅಂತೆಯೇ ಅವರ ಭಾವಚಿತ್ರವನ್ನೂ ನೀಡಿದರು.

ವೆಂಕಟಸುಬ್ಬಯ್ಯನವರ ಗುರುಗಳು, ಭಿಕ್ಷಾನ್ನಶಾಮಣ್ಣನವರನ್ನು ಕುರಿತಂತೆ ಇಲ್ಲಿ ಬರೆದಿರುವ ನಾಲ್ಕು ಸಾಲುಗಳಿಗೆ ಮುಖ್ಯ ಆಧಾರ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ವಿರಚಿತ "ಸುಬ್ಬಣ್ಣ" ಕಾದಂಬರಿ.

ಮೇಲಿನ ಎರಡೂ ಮೂಲಗಳಿಂದ ಲಭ್ಯವಾದ ಮಾಹಿತಿಗಳೊಂದಿಗೆ, ಮೂಲಕ್ಕೆ ಧಕ್ಕೆಬಾರದಂತೆ ಸ್ವಲ್ಪಮಟ್ಟಿಗೆ ನನ್ನ ಕಲ್ಪನೆಯನ್ನೂ ಬೆರೆಸಿದ್ದೇನೆ. ವೆಂಕಟಸುಬ್ಬಯ್ಯನೆಂಬ ತೆರೆಯ ಮರೆಯ ಈ ವಿದ್ವಾಂಸರ ವಿಷಯ ನಾಲ್ಕಾರು ರಸಿಕರನ್ನು ತಲುಪಿದರೆ ಸಂತೋಷಿಸುತ್ತೇನೆ. ವೆಂಕಟಸುಬ್ಬಯ್ಯನವರ ವಿಷಯ ಸಂಗ್ರಹಣೆಗೆ ಮಾರ್ಗ ತೋರಿದ ಶ್ರೀ ಬಿ.ವಿ.ಕೆ.ಶಾಸ್ತ್ರಿಯವರಿಗೆ ನನ್ನ ಅನಂತಾ ನಂತ ಧನ್ಯವಾದಗಳು. ಮಾಹಿತಿಯನ್ನೊದಗಿಸಿದ ವೆಂಕಟಸುಬ್ಬಯ್ಯನವರ ಕುಟುಂಬದವರಿಗೆಲ್ಲಾ ನನ್ನ ಕೃತಜ್ಞತೆಗಳು. ಅಂತೆಯೇ ಮೈಸೂರಿನ ಶಾರದಾ ವಿಲಾಸ ವಿಜ್ಞಾನ ಕಾಲೇಜಿನ ಇಂಗ್ಲೀಷ್ ವಿಭಾಗದ ಪ್ರವಾಚಕರಾದ

ಶ್ರೀ ಎ.ಆರ್.ನಾಗಭೂಷಣರಿಗೂ ನಾನು ಆಭಾರಿ. ಈ ಬರವಣಿಗೆಯನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟಿರುವ ಶ್ರೀ ಸದ್ಗುರು ಪ್ರಿಂಟರ್ಸ್, ಮೈಸೂರು, ಇವರಿಗೂ ನನ್ನ ವಂದನೆಗಳು. ಕಲಾರಸಿಕರು ಈ ಪ್ರಕಟಣೆಯನ್ನು ಸ್ವಾಗತಿಸುವರೆಂದು ನಂಬುತ್ತೇನೆ.

ಮೈಸೂರು
೧೭-೦೮-೧೯೯೮

ಟಿ.ಎನ್.ಪದ್ಮ

ಪಿಟೀಲು ವಿದ್ವಾನ್

ವೆಂಕಟಸುಬ್ಬಯ್ಯ

ಭಾರತೀಯ ಸಂಗೀತ ಕ್ಷೇತ್ರದಲ್ಲಿ ಅಸಂಖ್ಯ ವಾದ್ಯಗಳಿದ್ದರೂ ಅವುಗಳಲ್ಲಿ 'ಪಿಟೀಲು' ವಾದ್ಯ ವಿಶಿಷ್ಟ ಸ್ಥಾನವನ್ನು ಗಳಿಸಿದೆ. ಇದಕ್ಕೆ ಕಾರಣಗಳು ಹಲವು. ಈ ವಾದ್ಯದಲ್ಲಿ ಮೂಡಿಸಬಹುದಾದ ಸ್ಥಾಯಿ ವ್ಯಾಪ್ತಿ, ಏಕಕಾಲದಲ್ಲಿ ನುಡಿಸಬಹುದಾದ ಸ್ವರಗಳ ಸಂಖ್ಯೆ ಅರ್ಥಾತ್ ಸ್ವರಸಾಂಗತ್ಯ (Number of Notes that can be produced at a time), ಅಖಂಡ ಸ್ವರಸಾಧ್ಯತೆ (Continuity of Sound), ನುಡಿಸುವಾಗ ಇಟ್ಟುಕೊಳ್ಳಬಹುದಾದ ಭಂಗಿ (Playing Posture), ಅಷ್ಟಲ್ಲದೆ ಒಂದೆಡೆಯಿಂದ ಮತ್ತೊಂದೆಡೆಗೆ ಸುಲಭವಾಗಿ ಒಯ್ಯಲಾಗುವಿಕೆ (Easy Portability) ; ಈ ವಾದ್ಯದ ಜನಪ್ರಿಯತೆಗೆ ಇರುವ ಕಾರಣಗಳಲ್ಲಿ ಕೆಲವು. ಸುಮಾರು ೧೮ ನೇ ಶತಮಾನದ ಕಡೆಯ ವೇಳೆಗೆ ಕರ್ನಾಟಕ ಸಂಗೀತಕ್ಷೇತ್ರದಲ್ಲಿ ಸ್ಪಷ್ಟವಾಗಿ ತಳವೂರಿ ಪ್ರಯೋಗಗೊಂಡ ಈ ವಾದ್ಯ ಬಹುಬೇಗ ಜನಪ್ರಿಯವಾದ್ಯವಾಯಿತು. ಹೀಗಾಗಿ ವಾದ್ಯವು ತನಿವಾದ್ಯವಾಗಿಯಷ್ಟೇ ಬಳಕೆಗೊಳ್ಳಲಿಲ್ಲ ; ಗಾಯನ, ವಾದನ ಕಚೇರಿಗಳಲ್ಲಿ ಪಕ್ಕವಾದ್ಯವಾಗಿಯೂ, ಹರಿಕಥಾಕಾಲಕ್ಷೇಪ, ನಾಟ್ಯಕಚೇರಿ ಹಾಗೂ ನಾಟಕಗಳ ಹಿಮ್ಮೇಳದಲ್ಲೂ ಉಪಯೋಗಿಸಲ್ಪಟ್ಟಿತು.

ಕರ್ನಾಟಕ ಸಂಗೀತಕ್ಷೇತ್ರದಲ್ಲಿ ಪಿಟೀಲು ವಾದ್ಯವನ್ನು ಅಳವಡಿಸಿದ ಕೀರ್ತಿ ಶ್ರೀ ಮುತ್ತುಸ್ವಾಮಿ ದೀಕ್ಷಿತರ ಶಿಷ್ಯರೂ,

ಸಹೋದರರೂ ಆದ ಬಾಲುಸ್ವಾಮಿ ದೀಕ್ಷಿತರು (೧೭೮೬ - ೧೮೫೮) ಮತ್ತು ತಂಜಾವೂರ ಚತುಷ್ಟಯರಲ್ಲಿ ಒಬ್ಬರಾದ "ವಡಿವೇಲು" ಅವರಿಗೆ ಸಲ್ಲುತ್ತದೆ. ಪಿಟೀಲು ವಾದಕರ ಪ್ರಾಚೀನ ಉಲ್ಲೇಖದಲ್ಲಿ ನಾವು ಮೊದಲಿಗೆ ಶ್ರೀ ಮನ್ಮಹಾರಾಜ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರನ್ನು (೧೭೯೪ - ೧೮೬೮) ಸ್ಮರಿಸಬೇಕು. ಒಡೆಯರು ಪಿಟೀಲು ವಿದ್ವಾಂಸರಾದ. ಪೊನ್ನುಸ್ವಾಮಿಯವರನ್ನು ವಿಶಿಷ್ಟ ರೀತಿಯಲ್ಲಿ ಎಂದರೆ ಮುತ್ತಿನ ಕುಚ್ಚುಕಟ್ಟಿದ ಕಮಾನನ್ನು ಕೊಟ್ಟು ಸನ್ಮಾನಿಸಿದ್ದಾಗಿ ತಿಳಿದುಬರುತ್ತದೆ. ವಾಸ್ತವವಾಗಿ ಕಲಾಪೋಷಣೆಯಂಥ ಸತ್ಸಂಪ್ರದಾಯಗಳನ್ನು ಪೋಷಿಸಿ ಬೆಳೆಸಿದವರಲ್ಲಿ ಮೈಸೂರಿನ ಅರಸರು ಪ್ರಧಾನ ಪಾತ್ರವಹಿಸಿರುತ್ತಾರೆ. ಇದಕ್ಕೆ ಕಾರಣ ಈ ದೊರೆಗಳಲ್ಲಿ ಕೆಲವರು ಸ್ವತಃ ಸಂಗೀತಜ್ಞರೂ ಇನ್ನು ಕೆಲವರು ಸಂಗೀತದೆಡೆಗೆ ಅತೀವ ಆಸಕ್ತಿಯುಳ್ಳವರೂ ಆಗಿದ್ದುದು. ಅರಸರ ಈ ಸಮೂಹವು ಮೈಸೂರನ್ನು ಒಂದು ಕಲಾಕೇಂದ್ರವಾಗಿಸಿದ್ದಷ್ಟೇ ಅಲ್ಲದೆ ತಂಜಾವೂರಿನ ನಂತರ ಅದಕ್ಕೆ ದ್ವಿತೀಯ ಸ್ಥಾನವನ್ನು ಗಳಿಸಿಕೊಟ್ಟರು. ಮೈಸೂರಿನ ಅರಸರ ಸಂಸ್ಥಾನದಲ್ಲಿ ಸಂಗೀತ ವಿದ್ವನ್ಮಣಿಗಳಾಗಿ ಮೆರೆದವರಲ್ಲಿ ಆದಿ ಅಪ್ಪಯ್ಯ (ಭೈರವಿ ರಾಗ ಅಟ್ಟತಾಳದ 'ವಿರಿಬೋಣಿ' ವರ್ಣದ ಕರ್ತೃ), ವೀಣೆ ಚಿಕ್ಕರಾಮಪ್ಪ, ಲಾಲ್‌ಗುಡಿ ರಾಮಯ್ಯರ್, ರಾಧಾಕೃಷ್ಣ ಅಯ್ಯರ್, ಸದಾಶಿವರಾಯರು, ಮೂಗುರು ಸುಬ್ಬಣ್ಣ, ವೀಣೆ ಶೇಷಣ್ಣ, ಮೈಸೂರು ಕೆ.ವಾಸುದೇವಾಚಾರ್ಯರು, ಬಿಡಾರಂ ಕೃಷ್ಣಪ್ಪ, ಮುತ್ತಯ್ಯ ಭಾಗವತರು, ಟಿ.ಎಂ.ಪುಟ್ಟಸ್ವಾಮಯ್ಯ, ಟಿ.ಚೌಡಯ್ಯ, ವೀಣಾ ವೆಂಕಟಗಿರಿಯಪ್ಪ, ಸೋಸಲೆ ರಾಮದಾಸರು ಕೆಲವರು. ಇದೇ ಆಸ್ಥಾನದಲ್ಲೇ

ವಿದ್ವಾಂಸರಾಗಿ ನೇಮಕವಾಗಬಹುದಾಗಿದ್ದ, ಆದರೆ ವಿನಯ ಪೂರ್ವಕವಾಗಿಯೇ ಅದನ್ನು ನಿರಾಕರಿಸಿದವರು ಪಿಟೀಲು ವಿದ್ವಾನ್ ವೆಂಕಟಸುಬ್ಬಯ್ಯನವರು. ವೃತ್ತಿಯಲ್ಲಿ ಶಾನುಭೋಗರಾಗಿದ್ದು ಪ್ರವೃತ್ತಿಯಲ್ಲಿ ಸಂಗೀತವಿದ್ವಾಂಸರಾಗಿ ಆತ್ಮೋನ್ನತಿಗಾಗಿ ಕಲೋಪಾಸನೆ ಮಾಡಿದ ಮಹನೀಯರು. ಇವರೇ ಆಲಗೂಡು ವೆಂಕಟಸುಬ್ಬಯ್ಯನೆಂದೂ ಗುರುತಿಸಲ್ಪಟ್ಟಿದ್ದರು. ಸಂಗೀತಕ್ಷೇತ್ರದ ದಿಗ್ಗಜಗಳೆನಿಸಿದ ಟಿ.ಎಂ.ಪುಟ್ಟಸ್ವಾಮಯ್ಯ, ಟಿ.ಚೌಡಯ್ಯನವರಂಥ ಅನೇಕರಿಂದ ಪ್ರಶಂಸಿಸಲ್ಪಟ್ಟ ಅದ್ವಿತೀಯರು ; ಆದರೂ ಅತಿ ಸರಳ ಸ್ವಭಾವದವರು.

ಒಮ್ಮೆ ಸೋಸಲೆ ಶ್ರೀಯವರ ಸಮ್ಮುಖದಲ್ಲಿ ಪಿಟೀಲು ವಾದನದಲ್ಲಿ ಶಾಸ್ತ್ರೀಯ ಸಂಗೀತ ಕಚೇರಿಯೊಂದು ನಡೆಯುತ್ತಿದೆ. ಕಲಾವಿದ ಒಂದರ ನಂತರ ಮತ್ತೊಂದರಂತೆ ಸಂಗೀತ ರಚನೆಗಳನ್ನು ನುಡಿಸುತ್ತಿದ್ದಾರೆ. ಶ್ರೀಯವರು ಹಾಗೂ ಅಲ್ಲಿದ್ದ ಇತರರೆಲ್ಲರೂ ನಾದಾನುಭವದಿಂದ ಮೈಮರೆತಿದ್ದಾರೆ, ಶ್ರೋತೃಗಳೆಲ್ಲರ ಮುಖಭಾವ ಉಲ್ಲಾಸ ಗೊಂಡಿದೆ. ಇದ್ದಕ್ಕಿದ್ದಂತೆ ಸಂಗೀತ ನಿಲ್ಲುತ್ತದೆ - ಶ್ರಾವಕರೆಲ್ಲ ಕಣ್ತೆರೆಯುತ್ತಾರೆ - ಸಂಗೀತಕಚೇರಿ ಮುಕ್ತಾಯಗೊಂಡ ಅರಿವು ಅವರಿಗಾಗುತ್ತದೆ. ತಮ್ಮ ಮೆಚ್ಚುಗೆಯನ್ನು ಕಲಾವಿದರೆದುರು ಸೂಚಿಸಲು ಶ್ರಾವಕರಿಗೆ ಮಾತುಗಳಿಲ್ಲವಾಗಿದೆ. ಮಾತಿಗೆ ಮೀರಿದ ರಸಾನಂದವನ್ನು ಅವರೆಲ್ಲ ಅನುಭವಿಸಿದ್ದಾರೆ. ಹೀಗೆಂದೇ ಮಾತಿಗಿಂತ ಮೌನ ಲೇಸು ಎಂದು ಅವರು ತಾವನುಭವಿಸಿದ ನಾದಾನುಸಂಧಾನವನ್ನು ಪುನಃ ಪುನಃ ಸ್ಮರಿಸಿಕೊಳ್ಳುತ್ತಿದ್ದಾರೆ.

ಕಚೇರಿಯ ನಂತರ ಕಲಾವಿದರನ್ನು ಸನ್ಮಾನಿಸುವುದು ಮಠದ ಸಂಪ್ರದಾಯ. ಶ್ರೀಯವರು ಬೆಳ್ಳಿಯ ತಟ್ಟೆಯೊಂದರಲ್ಲಿ ನಾಣ್ಯಗಳನ್ನು ತುಂಬಿಸಿ, ಹಣ್ಣು ಹೂವುಗಳೊಂದಿಗೆ ಆಶೀರ್ವಾದ ಪೂರ್ವಕವಾಗಿ ಮುಖ್ಯಕಲಾವಿದರಿಗೆ ನೀಡಿ, ಭೋಜನ ಮುಗಿಸಿ ಕೊಂಡು ಹೊರಡಬೇಕೆಂದು ಹೇಳುತ್ತಾರೆ. ಆದರೆ ಆ ವಿದ್ವಾಂಸರು ಇದನ್ನೆಲ್ಲ ನಿರೀಕ್ಷಿಸಿದವರಲ್ಲ. ಆದಾಗ್ಯೂ ಶ್ರೀಯವರ ಆದೇಶವನ್ನು ಉಲ್ಲಂಘಿಸುವಷ್ಟು ದಾರ್ಷ್ಟ್ಯ ಅವರಿಗಿಲ್ಲ. ಹೀಗಾಗಿ 'ಬಳುವಳಿ ಗಳೆಲ್ಲ ನನಗೇಕೆ? ಇಂದಿನ ಭೋಜನಕ್ಕಾಗಿ ಮಾಡಿಸಿರುವ ಭಕ್ಷ್ಯದಲ್ಲಿ ಒಂದೆರಡನ್ನು ಮಾತ್ರ ಪೊಟ್ಟಣ ಕಟ್ಟಿಸಿ ನನಗೆ ಕೊಟ್ಟಿದ್ದರೆ ಮಹಾಪ್ರಸಾದವಾಗುತ್ತಿತ್ತು' ಎಂದು ನುಡಿಯುತ್ತಾರೆ. ಅದ್ವಿತೀಯ ಕಲಾವಿದನ ಇಂತಹ ಆಶಾರಹಿತ, ಮುಗ್ಧ ಸ್ವಭಾವದಿಂದ ಶ್ರೀಯವರು ಸುಪ್ರೀತರಾಗುತ್ತಾರೆ. ಈ ಪ್ರಸಂಗದಲ್ಲಿ ಸ್ವಾಮಿ ಗಳೊಂದಿಗೆ ಹೀಗೆ ನುಡಿದ ಸರಳ ಸ್ವಭಾವದ ನಾದಪುರುಷರೇ ಪಿಟೀಲು ವಿದ್ವಾನ್ ವೆಂಕಟಸುಬ್ಬಯ್ಯನವರು.

ವೆಂಕಟಸುಬ್ಬಯ್ಯನವರು ಶುಕ್ರವಾರ, ಐದನೇ ಅಕ್ಟೋಬರ್ ೧೮೮೫ ರಲ್ಲಿ ಜನಿಸಿದರು. ಇವರ ತಾಯಿ ಗುಂಡಮ್ಮ, ತಂದೆ ಸಂಪಿಗೆ ರಾಯರು. ವೆಂಕಟಸುಬ್ಬಯ್ಯನವರಿಗೆ ಬಾಲ್ಯದಿಂದಲೇ ಸಂಗೀತ ದೆಡೆಗೆ ವಿಶೇಷ ಆಸಕ್ತಿ. ಅದೇ ಊರಿನಲ್ಲಿದ್ದ ಗುರು "ಭಿಕ್ಷಾನ್ನ" ಶಾಮಣ್ಣನವರಲ್ಲಿ ವೆಂಕಟಸುಬ್ಬಯ್ಯನವರು ಸಂಗೀತಾಭ್ಯಾಸ ಮಾಡಿದರು.

ಶಾಮಣ್ಣನವರಿಗೆ "ಭಿಕ್ಷಾನ್ನ ಶಾಮಣ್ಣ"ನೆಂಬ ಹೆಸರು ಬರಲು ಕಾರಣ, ಜೀವಿತಾಂತ್ಯದ ಕೆಲವು ವರ್ಷಗಳಲ್ಲಿ ಅವರು ಪ್ರತಿದಿನವೂ

ಐದು ಮನೆಗಳಲ್ಲಿ ಅನ್ನವನ್ನು ಭಿಕ್ಷೆಯಾಗಿ ಸ್ವೀಕರಿಸಿ ಅದನ್ನು ಅಶಕ್ತರಾದವರಿಗೆ ಹಂಚುತ್ತಿದ್ದರಂತೆ. ವಾಸ್ತವವಾಗಿ ಭಿಕ್ಷಾಟ ನೆಯೆಂಬುದು ಅಹಂಕಾರ ದಮನಕ್ಕಾಗಿ ಅನುಸರಿಸುವ ಒಂದು ಮಾರ್ಗವಷ್ಟೆ ! ಭಾಗವತಧರ್ಮದಲ್ಲಿದು 'ಉಂಛವೃತ್ತಿ' ಎಂದು ಕರೆಯಲ್ಪಟ್ಟು, ಭಾಗವತ ಧರ್ಮದ ಒಂದು ಭಾಗವೂ ಆಗಿದೆ. ಇದರ ಅರಿವಿದ್ದೇ ಶಾಮಣ್ಣನವರು ಅನ್ನಭಿಕ್ಷೆ ಮಾಡುತ್ತಿದ್ದಿರ ಬಹುದು.

ಶಾಮಣ್ಣನವರದು ಅಪ್ರತಿಮ ಸಂಗೀತ ವಿದ್ಯೆ. ವ್ಯಕ್ತಿತ್ವ ವಿಶಿಷ್ಟ. ಬಹಿರ್ನೋಟಕ್ಕೆ ಸಾಮಾನ್ಯ ಮೈಕಟ್ಟು. ಚಿಂತೆ, ಆತಂಕ, ನಿರುತ್ಸಾಹ ಅಥವಾ ಶಾಂತತೆ- ಇವುಗಳಲ್ಲಿ ಯಾವುದೆಂದು ನಿರ್ಧರಿಸಲಾಗದ ಮುಖಭಾವ. ಆದರೂ ತೇಜಸ್ಸಿನಿಂದ ಕೂಡಿದ ಗಂಭೀರವಾದ ಮುಖವದು. ವಯಸ್ಸು ಏಳು ದಶಕಗಳನ್ನು ದಾಟಿದರೂ ಬೆಂಕಿಯ ಸ್ವಭಾವ ಆರಿರಲಿಲ್ಲ. ಮಾತಿನಲ್ಲಾಗಲೀ, ಕಾರ್ಯದಲ್ಲಾಗಲೀ, ಸ್ವಲ್ಪ ಹೆಚ್ಚು ಕಡಿಮೆಯಾದರೂ ಕಷ್ಟ. ಅಂತಹವರೊಂದಿಗೆ ಮುಖಕೊಟ್ಟು ಮಾತನಾಡುವುದನ್ನೇ ನಿಲ್ಲಿಸಿಬಿಡುತ್ತಿದ್ದರು, ಶಾಮಣ್ಣನವರು. ಹಾಗಿದ್ದರೂ ಊರಿನ ಎಲ್ಲರಿಗೂ ಗೊತ್ತು, ಶಾಮಣ್ಣನವರು ಪಿಟೀಲನ್ನು ಕೈಗೆತ್ತಿಕೊಂಡರೆ ಅದ್ಭುತ ನಾದಲೋಕವೇ ಸೃಷ್ಟಿ ಯಾಗುವುದೆಂದು. ಇದಕ್ಕೆ ಕಾರಣ ಶಾಮಣ್ಣನವರ ಸಂಗೀತ ಪ್ರಯೋಗಕ್ಕೆ ಯಾವ ಲೌಕಿಕ ಆಶೋತ್ತರಗಳ ಗುರಿಯಿರಲಿಲ್ಲ. ಬದಲಾಗಿ ಅದು ಆತ್ಮೋನ್ನತಿಯ ಸಾಧನವಾಗಿತ್ತು. ಇಂತಹ ಅಧ್ಯಾತ್ಮ ಸಾಧಕನಲ್ಲಿ ವೆಂಕಟಸುಬ್ಬಯ್ಯನವರಿಗೆ ಶಿಷ್ಯವೃತ್ತಿ ಲಭ್ಯವಾದುದು ಅವರ ಪುಣ್ಯ.

ವೆಂಕಟಸುಬ್ಬಯ್ಯನವರು ಮೂಲತಃ ಶ್ರೀಮಂತರು. ಅವರ ತಾತನವರ ಆಸ್ತಿಯ ಬಹುಭಾಗ ಇವರ ಪಾಲಿಗಿದ್ದಿತು. ಅಲ್ಲದೆ ಶಾನುಭೋಗಿಕೆಯಿಂದಲೂ ಸಂಪಾದನೆಯಿದ್ದಿತು. ಸ್ವಂತ ಜಮೀನಿನ ಫಸಲು ಚೆನ್ನಾಗಿದ್ದಿತು. ಹೀಗಾಗಿ ವೆಂಕಟಸುಬ್ಬಯ್ಯ ಬಾಲ್ಯದಿಂದಲೂ ಹಣಕಾಸಿನ ಕೊರತೆಯಿಲ್ಲದೆ ಬೆಳೆದುಬಂದರು. ಗುಂಡಮ್ಮ ಮತ್ತು ಸಂಪಿಗೆರಾಯರು ಸೂಕ್ತವಯಸ್ಸಿನಲ್ಲಿ ವೆಂಕಟಸುಬ್ಬಯ್ಯನವರಿಗೆ ಉಪನಯನ ವಿವಾಹಾದಿ ಕಾರ್ಯಗಳನ್ನು ನೆರವೇರಿಸಿದರು. ತೆರಕಣಾಂಬಿಯ ನಂಜಮ್ಮನವರು ಶುಭ ಮುಹೂರ್ತದಲ್ಲಿ ಸಂಪಿಗೆರಾಯರ ಸೊಸೆಯಾಗಿ, ವೆಂಕಟಸುಬ್ಬಯ್ಯನವರ ಪತ್ನಿಯಾಗಿ ಬಂದರು. ಕಾಲಾನುಕ್ರಮದಲ್ಲಿ ವೆಂಕಟಸುಬ್ಬಯ್ಯನವರಿಗೆ ಮೂವರು ಪುತ್ರಿಯರ ಸಂತಾನವೂ ಆಯಿತು. ಸಂಸಾರ ಸುಖವಾಗಿ ನಡೆದಿತ್ತು. ಆದರೆ ಈ ಸುಖಶಾಂತಿ ಬಹುಕಾಲ ನಿಲ್ಲಲಿಲ್ಲ. ವೆಂಕಟಸುಬ್ಬಯ್ಯನವರ ತಂದೆ ಸಂಪಿಗೆರಾಯರು ಇದ್ದಕ್ಕಿದ್ದಂತೆ ಕಾಲವಾದರು. ಗುಂಡಮ್ಮನವರು ಪತಿವಿಯೋಗದಿಂದ ಬಹುವಾಗಿ ನೊಂದರು. ನಂತರ ನರಸೀಪುರದ ಮನೆಯನ್ನು ಬಾಡಿಗೆಗೆ ಕೊಟ್ಟು, ವೆಂಕಟಸುಬ್ಬಯ್ಯನವರು ತಾಯಿಯೊಂದಿಗೆ ಮೈಸೂರಿಗೆ ಬಂದರು. ವೀಣೆಶಾಮಣ್ಣ ರಸ್ತೆಯಲ್ಲಿ ಮನೆಯೊಂದನ್ನು ಬಾಡಿಗೆಗೆ ಹಿಡಿದರು. ಅದೇ ಮನೆಯ ಒಡೆಯರಾಗಿದ್ದವರು ಸಂಗೀತ ವಿದ್ವಾಂಸರಾಗಿದ್ದ ಚೆನ್ನಕೇಶವಯ್ಯ. ಇವರು ತಾವಾಗಿಯೇ ವೆಂಕಟಸುಬ್ಬಯ್ಯನವರನ್ನು ತಮ್ಮ ಮನೆಯಲ್ಲೇ ಬಾಡಿಗೆಗೆ ಇರಬಹುದೆಂದು ಆಹ್ವಾನಿಸಿದರು. ಬಾಡಿಗೆಯಿಲ್ಲದೆ ವಾಸಕ್ಕೆ ಮನೆ ನೀಡುವೆನೆಂದರೆ ಸ್ವಾಭಿಮಾನಿಯೂ, ಸಂಕೋಚ ಸ್ವಭಾವದವರೂ

ಆದ ವೆಂಕಟಸುಬ್ಬಯ್ಯನವರು ಒಪ್ಪುವುದಿಲ್ಲವೆಂಬುದು ಚೆನ್ನಕೇಶವಯ್ಯನವರಿಗೆ ತಿಳಿದಿತ್ತು. ಹೀಗೆಂದೇ ಅವರು ವೆಂಕಟಸುಬ್ಬಯ್ಯನವರಿಂದ ಬಾಡಿಗೆ ಪಡೆದು ಮನೆ ಕೊಟ್ಟರು. ಸಂಗೀತ ವಿದ್ವಾಂಸರ ಸಹವಾಸವೇ ದೊರೆತುದಕ್ಕೆ ಸಂತೋಷಿಸಿದ ವೆಂಕಟಸುಬ್ಬಯ್ಯ, ಚೆನ್ನಕೇಶವಯ್ಯನವರ ಆಹ್ವಾನ ಮಾನ್ಯಮಾಡಿ ಅದೇ ಮನೆಗೆ ಬಂದರು. ಇವರೊಂದಿಗೆ ಹರಿಕಥೆ ವಿದ್ವಾಂಸರಾಗಿದ್ದ ಸೋಸಲೆ ರಾಮದಾಸರೂ ಇದ್ದರು. ಕಲಾಕಾರರಾದ ಮೂವರೂ ಒಂದೆಡೆ ಸೇರಿದ್ದರಿಂದ ವೆಂಕಟಸುಬ್ಬಯ್ಯನವರ ದುಃಖ ಸ್ವಲ್ಪಮಟ್ಟಿಗೆ ಶಮನವಾಯಿತು. ಮೂವರೂ ಒಟ್ಟಾಗಿ ಸೇರಿ ಸಂಗೀತಾಭ್ಯಾಸ ಮಾಡಲಾರಂಭಿಸಿದರು. ಚೆನ್ನಕೇಶವಯ್ಯನವರ ಗಾಯನ, ವೆಂಕಟಸುಬ್ಬಯ್ಯನವರ ಪಿಟೀಲು, ರಾಮದಾಸರ ಖಂಜಿರದೊಂದಿಗೆ ಸಂಗೀತಾಭ್ಯಾಸ ನಡೆಯುತ್ತಿತ್ತು.

ಈ ಸಂದರ್ಭದಲ್ಲಿ ರಾಮದಾಸರ ವೈಶಿಷ್ಟ್ಯವನ್ನು ಸ್ವಲ್ಪ ಹೇಳುವುದು ಸೂಕ್ತ. ಸೋಸಲೆ ರಾಮದಾಸರು 'ಕೀರ್ತನ ಶಿರೋಮಣಿ' ಎಂಬ ಬಿರುದಿಗೆ ಪಾತ್ರರಾಗಿದ್ದವರು. ಇವರ ಜನ್ಮಸ್ಥಳವೂ ತಿರುಮಕೂಡಲ ನರಸೀಪುರವೇ. ಕೀರ್ತನಕಲೆ ರಾಮದಾಸರಿಗೆ ತಂದೆಯಿಂದಲೇ ರಕ್ತಗತವಾಗಿ ಬಂದಿದ್ದಿತು. ಜೊತೆಗೆ ಚಿಕ್ಕಂದಿನಿಂದಲೇ ಶಾಸ್ತ್ರೀಯ ಸಂಗೀತವನ್ನೂ, ಖಂಜಿರ ನುಡಿಸುವುದನ್ನೂ ಕಲಿತು ಇವರು ಉತ್ತಮ ನಟರೂ ಆಗಿದ್ದರು. ಸಂಸ್ಕೃತ, ತೆಲುಗು, ಕನ್ನಡ, ತಮಿಳು - ಈ ಎಲ್ಲ ಭಾಷೆಗಳಲ್ಲೂ ಪ್ರಭಾವಶಾಲಿಯಾಗಿ ಇವರು ನಡೆಸುತ್ತಿದ್ದ ಹರಿಕಥೆ ಎಂಥಹವರನ್ನೂ ತಲ್ಲೀನರಾಗಿಸುತ್ತಿತ್ತು. ನೃಸಿಂಹಾವತಾರದ ಬಗ್ಗೆ ಇವರು ನಡೆಸುತ್ತಿದ್ದ

ಕಥೆಯನ್ನು ಕೇಳಿದವರೊಬ್ಬರು ಹೀಗೆಂದಿದ್ದರಂತೆ. "ರಾಮದಾಸರು ನಡೆಸಿಕೊಡುತ್ತಿದ್ದ ನೃಸಿಂಹಾವತಾರ ಕಥಾ ಶ್ರವಣದ ಸಮಯದಲ್ಲಿ ಪಕ್ಕವಾದ್ಯ ಕಲಾವಿದರು ನಡುಗಲಾರಂಭಿಸುತ್ತಿದ್ದರು. ಶ್ರೀನಾರಸಿಂಹನು ದುಷ್ಟ ಶಿಕ್ಷೆಗಾಗಿ ಅವತರಿಸಿದ ರೀತಿಯ ವರ್ಣನೆಯನ್ನು ರಾಮದಾಸರು ಅಷ್ಟು ಭಾವುಕತೆಯಿಂದ ಚಿತ್ರಿಸುತ್ತಿದ್ದರು." ಇಂತಹ ಅಪ್ರತಿಮ ಕೀರ್ತನಕಾರರು ವೆಂಕಟಸುಬ್ಬಯ್ಯನವರ ಜೊತೆಗೂಡಿದುದು ಒಳ್ಳೆಯದೇ ಆಯಿತು.

ವೆಂಕಟಸುಬ್ಬಯ್ಯನವರು ತಮ್ಮ ವಾಸವನ್ನು ಕಾರಣಾಂತರದಿಂದ ಕೆಲವು ವರ್ಷಗಳ ನಂತರ ಕಾಳಿಂಗಶೆಟ್ಟಿಲಾಯದ ಮನೆಯೊಂದಕ್ಕೆ ಸ್ಥಳಾಂತರಿಸಿದರು. ವೆಂಕಟಸುಬ್ಬಯ್ಯನವರಲ್ಲಿಗೆ ಬಿ.ಕೆ.ಪದ್ಮನಾಭರಾಯರು, ಸಂಗೀತಕಲಾನಿಧಿಗಳೆಂಬ ಬಿರುದಿಗೆ ಪಾತ್ರರಾಗಿದ್ದ ಮೈಸೂರು ವಾಸುದೇವಾಚಾರ್ಯರು, ಟಿ.ಚೌಡಯ್ಯನವರು, ಟಿ.ಎಂ.ಪುಟ್ಟಸ್ವಾಮಯ್ಯನವರೂ ಬರುತ್ತಿದ್ದರು. (ಟಿ.ಎಂ.ಪುಟ್ಟಸ್ವಾಮಯ್ಯನವರು 'ಮೂಗಯ್ಯ' ನವರೆಂಬ ಅಡ್ಡಹೆಸರಿನಿಂದಲೂ ಕರೆಯಲ್ಪಡುತ್ತಿದ್ದರು)

ಮೋಹನರಾಗದ "ರಾರಾ ರಾಜೀವ ಲೋಚನ ರಾಮ", ಕಮಾಚ್ ರಾಗದ "ಬ್ರೋಚೇವಾರೆವರುರಾ" - ರಚನೆಗಳನ್ನು ಕೇಳದವರಿದ್ದಾರೆಯೇ ? ಇಂತಹ ಹಲವು ರಚನೆಗಳ ಕರ್ತೃ ವಾಸುದೇವಾಚಾರ್ಯರು, ಮೈಸೂರು ವಾಗ್ಗೇಯಕಾರರಲ್ಲಿ ಒಬ್ಬ ಮಹನೀಯರು. ಇವರು ತಮ್ಮ ರಚನೆಗಳನ್ನು ವೆಂಕಟಸುಬ್ಬಯ್ಯನವರಲ್ಲಿ ತಂದು ತೋರಿಸಿ ಅವರ ಸಮ್ಮತಿ ಪಡೆಯುತ್ತಿದ್ದರು. ಮುಂದೆ ವೆಂಕಟಸುಬ್ಬಯ್ಯನವರ ಒಬ್ಬ ಮಗಳ ವಿವಾಹ ವಾಸುದೇವಾಚಾರ್ಯರು

ಸೂಚಿಸಿದ ವರನೊಂದಿಗೇ ಜರುಗಿತು. ಇಂತಹ ಕೆಲವು ಪ್ರಸಂಗಗಳು ಗೆಳೆಯರ ನಡುವೆ ಇದ್ದ ನಿಕಟಸ್ನೇಹಕ್ಕೆ ಸಾಕ್ಷಿ.

ಹಬ್ಬ ಹರಿದಿನ ಉತ್ಸವಾದಿಗಳು ಜನರನ್ನು ಒಗ್ಗೂಡಿಸುವಲ್ಲಿ ಅತ್ಯುತ್ತಮವಾದ ಒಂದು ಮಾಧ್ಯಮವಷ್ಟೆ ! ಇಂತಹ ಸಂದರ್ಭಗಳಲ್ಲಿ ಜಾತಿ, ಮತ, ಕುಲ, ವಯಸ್ಸು ಮುಂತಾದ ಭೇದ ಮರೆತು ಜನ ಹರುಷದಿಂದ ಒಂದೆಡೆ ಸೇರಿ ಸಂತೋಷಿಸುವುದು ಸಾಮಾನ್ಯವಾದ ವಿಷಯ. ಇದರಿಂದ ಸ್ನೇಹ ಸೌಜನ್ಯಾದಿ ಗುಣಗಳು ಬಲಿಯುತ್ತವೆ. ನೈತಿಕತೆ, ಆಧ್ಯಾತ್ಮ ಚಿಂತನೆಗಳು ಉತ್ತಮಗೊಳ್ಳುತ್ತವೆ. ಈ ಕಾರಣದಿಂದಲೇ ನಮ್ಮ ಪೂರ್ವಜರು ವಿಶೇಷವಾಗಿ ಹಬ್ಬ-ಹರಿದಿನಗಳನ್ನು ಆಚರಿಸುತ್ತಿದ್ದುದು. ಅನೂಚಾನವಾಗಿ ಬಂದ ಇಂತಹ ಸಂಪ್ರದಾಯವನ್ನು ವೆಂಕಟಸುಬ್ಬಯ್ಯನವರೂ ಪಾಲಿಸಿದ್ದರು. ಪ್ರತಿವರ್ಷವೂ ಅವರು ರಾಮೋತ್ಸವವನ್ನು ವಿಶೇಷವಾಗಿ ಆಚರಿಸುತ್ತಿದ್ದರು. ಅವರು ಆಚರಿಸುತ್ತಿದ್ದ ಈ ಉತ್ಸವ ಬಹಳ ಜನಪ್ರಿಯವಾಗಿದ್ದಿತು. ಇದರಲ್ಲಿ ಖ್ಯಾತ ವಿದ್ವಾಂಸರೇ ಅಲ್ಲದೆ ಅವರ ಶಿಷ್ಯವರ್ಗದವರೂ ಬಂದು ಸೇರುತ್ತಿದ್ದರು. ಪರಸ್ಥಳದ ಜನರೂ ಪಾಲ್ಗೊಳ್ಳುತ್ತಿದ್ದರು. ವರ್ಷಕ್ಕೊಮ್ಮೆ ನಡೆಯುತ್ತಿದ್ದ ಈ ಉತ್ಸವದಲ್ಲೇ ಅಲ್ಲದೆ ದಿನನಿತ್ಯವೂ ನಾಲ್ಕಾರುಮಂದಿಗೆ ಊಟ ಹಾಕದೆ ವೆಂಕಟಸುಬ್ಬಯ್ಯನವರು ಭೋಜನ ಮಾಡುತ್ತಿರಲಿಲ್ಲ. ಹಣವಂತರೂ, ಗುಣವಂತರೂ, ಉದಾರಿಗಳೂ ಆಗಿದ್ದ ವೆಂಕಟಸುಬ್ಬಯ್ಯನವರು ಅತಿಥಿಗಳನ್ನು ಹೃತ್ಪೂರ್ವಕವಾಗಿ ಸತ್ಕರಿಸುತ್ತಿದ್ದರು. ಹೀಗೆ ವಿದ್ವಾಂಸರ, ಕಲಾರಸಿಕರ ಸಮಾವೇಶ ಹೆಚ್ಚೂ ಕಡಿಮೆ ಪ್ರತಿದಿನವೂ ಒಂದಲ್ಲ ಮತ್ತೊಂದು ಕಾರಣದಿಂದ ವೆಂಕಟಸುಬ್ಬಯ್ಯ

ನವರ ಮನೆಯಲ್ಲಿ ನಡೆಯುತ್ತಲೇ ಇದ್ದಿತು.

ವೆಂಕಟಸುಬ್ಬಯ್ಯನವರ ಪಿಟೀಲುವಾದನವೆಂದರೆ ಎಲ್ಲ ವಿದ್ವಾಂಸರಿಗೂ ವಿಶೇಷ ಪ್ರೀತಿ. ಟೈಗರ್ ವರದಾಚಾರ್ಯರಂತಹ ವಿದ್ವಾಂಸರಿಗೆ ವೆಂಕಟಸುಬ್ಬಯ್ಯನವರ ಪಿಟೀಲು ಪಕ್ಕವಾದ್ಯವಿದ್ದರೆ ಅವರ ಮನೋಧರ್ಮ ಉಕ್ಕಿ ಹರಿಯುತ್ತಿತ್ತಂತೆ. ವಾಸ್ತವವಾಗಿ ಪಕ್ಕವಾದ್ಯದವರು ಮುಖ್ಯಗಾಯಕನಿಗೆ ಅನುವರ್ತಿಗಳಾಗಿದ್ದು ಸಂಗೀತಕಚೇರಿ ಹೆಚ್ಚು ಕಳೆಗಟ್ಟುವಲ್ಲಿ ಪೂರಕರೂ, ಪ್ರೇರಕರೂ ಆಗಿರುತ್ತಾರೆ. ಇವರಿಬ್ಬರ ಪರಸ್ಪರ ಸ್ನೇಹಭಾವದ ಸ್ಪರ್ಧೆಯಿಂದ ಮಾತ್ರ ಕಚೇರಿಗಳಲ್ಲಿ ಜೀವಕಳೆ ತುಂಬಿ ತುಳುಕುವುದು ಸಾಧ್ಯ. ಇಂತಹ ಒಂದು ಮನೋಧರ್ಮವನ್ನು ಸಹಕಲಾವಿದರಲ್ಲಿ ಮೂಡಿಸುವಲ್ಲಿ ವೆಂಕಟಸುಬ್ಬಯ್ಯನವರಿಗೆ ವಿಶಿಷ್ಟ ಸಾಮರ್ಥ್ಯ ವಿದ್ದಿತು. ಅಂತೆಯೇ ಹಲವಾರು ಖ್ಯಾತ ಕಲಾವಿದರು ವೆಂಕಟ ಸುಬ್ಬಯ್ಯನವರ ಪಕ್ಕವಾದ್ಯವನ್ನು ಬಯಸುತ್ತಿದ್ದುದು. ವೆಂಕಟ ಸುಬ್ಬಯ್ಯನವರು ಹಿರಿಯ ವಿದ್ವಾಂಸರಿಗಷ್ಟೇ ಅಲ್ಲ, ಚಿಕ್ಕ ಮಗುವೊಂದು ಹಾಡಿದರೂ ಆ ಗಾಯನವನ್ನು ಪೂರ್ಣವಾಗಿ ಕೇಳುವ ಸೌಜನ್ಯವನ್ನೂ, ಕೆಲವೊಮ್ಮೆ ಆ ಮಗುವಿನೊಂದಿಗೆ ಪಕ್ಕ ವಾದ್ಯ ನುಡಿಸುವ ಹಿರಿತನವನ್ನೂ ರೂಢಿಸಿಕೊಂಡಿದ್ದರು.

ಹೀಗೆ ಸ್ವಭಾವದಿಂದಲೂ, ಸಂಗೀತ ಪಾಂಡಿತ್ಯದಿಂದಲೂ ಹಿರಿಯರೆನಿಸಿದ್ದ ವೆಂಕಟಸುಬ್ಬಯ್ಯನವರನ್ನು ವಿದ್ವಾಂಸರು ತಿರುಚಿ ನಾಪಳ್ಳಿ, ಮದರಾಸು ಮುಂತಾದ ಸ್ಥಳಗಳಿಗೂ ಕರೆಸಿಕೊಳ್ಳುತ್ತಿದ್ದರು. ವೆಂಕಟಸುಬ್ಬಯ್ಯನವರು ತಾವಾಗಿ ಮುಂದುವರೆದು ಕಚೇರಿಗಳನ್ನು ಮಾಡುತ್ತಿದ್ದುದು ಕಡಿಮೆಯಾದರೂ, ಗೆಳೆಯರ ಒತ್ತಾಯಕ್ಕೆ

ಮಣಿದು ದೇಶದ ನಾನಾಭಾಗಗಳಲ್ಲಿ ತಮ್ಮ ಸಂಗೀತದ ಸೊಬಗನ್ನು ಬಿತ್ತರಿಸುತ್ತಿದ್ದರು. ಪ್ರತ್ಯೇಕ ಕಚೇರಿ (Solo), ಪಕ್ಕವಾದ್ಯ ಗಳೆರಡನ್ನೂ ಯಶಸ್ವಿಯಾಗಿ ನಡೆಸಿದರು. ಆಕಾಶವಾಣಿ ಕೇಂದ್ರ ದಿಂದಲೂ ಇವರ ಸಂಗೀತ ಪ್ರಸಾರವಾಗಿತ್ತು. ೧೯೬೩, ೧೯೬೪, ಹಾಗೂ ೧೯೬೫ ರಲ್ಲಿ ಕ್ರಮವಾಗಿ ಮೂರುಬಾರಿಯೂ ಸರ್ಕಾರದ ಪುರಸ್ಕಾರಕ್ಕೆ ಅವರು ಪಾತ್ರರಾದರು.

ವೆಂಕಟಸುಬ್ಬಯ್ಯನವರ ಜೀವಿತಕಾಲದಲ್ಲೇ ಅವರ ಸಂಗೀತ ವಿದ್ಯೆ ಮತ್ತು ವಾದನಶೈಲಿಗೆ ಸಂಬಂಧಿಸಿದಂತೆ ನಡೆದ ಕೆಲವು ಘಟನೆಗಳೆಂದರೆ - ಒಮ್ಮೆ ಅರಮನೆಯಲ್ಲಿ ಮಹಾರಾಜ-ಮಹಾ ರಾಣಿಯರ ಸಮ್ಮುಖದಲ್ಲಿ ಕೀರ್ತನ ವಿದ್ವಾನ್ ರಾಮದಾಸರಿಂದ 'ಶ್ರೀನಿವಾಸ ಕಲ್ಯಾಣ' ಎಂಬ ಹರಿಕಥೆ ನಡೆದಿದೆ. ರಾಮದಾಸರು ಪಕ್ಕವಾದ್ಯಕ್ಕಾಗಿ ವೆಂಕಟಸುಬ್ಬಯ್ಯನವರನ್ನೇ ಕರೆದೊಯ್ದಿದ್ದಾರೆ. ಹರಿಕಥೆ ಆರಂಭಗೊಂಡು ಸ್ವಲ್ಪ ವೇಳೆಯಾಗಿದೆ. ದಾಸರು ತನ್ಮಯತೆ ಯಿಂದ ಕಥೆ ಮುಂದುವರೆಸಿದ್ದಾರೆ. ಕಥಾರಂಭದಲ್ಲಿ ಕತೆಯೆಡೆಗೇ ಗಮನವಿದ್ದ ಮಹಾರಾಣಿಯವರಿಗೆ ಆನಂತರ ಕಥೆಗಿಂತ ಪಿಟೀಲು ವಾದನವೇ ಹೆಚ್ಚು ಆಕರ್ಷಕವೆನಿಸಿದೆ. ವಾದ್ಯದಿಂದ ಮೂಡಿ ಬರುತ್ತಿದ್ದ ಆ ನಾದಮಾಧುರ್ಯ, ನುಡಿಸುತ್ತಿದ್ದ ಕಲಾವಿದರ ಸೌಮ್ಯ ಭಾವಗಳನ್ನು ಮೆಚ್ಚಿದ ಮಹಾರಾಣಿ, ಹರಿಕಥಾ ಕಾರ್ಯಕ್ರಮ ಮುಗಿದ ನಂತರ ವಿದ್ವಾಂಸರನ್ನು ಸನ್ಮಾನಿಸಿ 'ಪಿಟೀಲು ನುಡಿಸಿದ ಆ ವಿದ್ವಾಂಸರನ್ನು ನಮ್ಮ ಆಸ್ಥಾನವಿದ್ವಾಂಸರಾಗಿ ನೇಮಕಮಾಡಿ ಕೊಳ್ಳಬೇಕಲ್ಲ' ಎಂದು ತಮ್ಮ ಇಚ್ಛೆಯನ್ನು ಅನುಚರರೊಂದಿಗೆ ವ್ಯಕ್ತಪಡಿಸಿದರು. ವೆಂಕಟಸುಬ್ಬಯ್ಯನವರಾದರೋ ಇಂತಹ

ಯಾವುದೇ ಬಂಧನಗಳಿಂದ ಮುಕ್ತರಾಗಿರಬೇಕೆಂಬ ಉದ್ದೇಶದಿಂದ ಮಹಾರಾಣಿಯವರ ಆಹ್ವಾನವನ್ನು ವಿನಯಪೂರ್ವಕವಾಗಿಯೇ ನಿರಾಕರಿಸಿದರು.

ಅಂದಿಗೆ ಆಸ್ಥಾನ ವಿದ್ವಾಂಸರ ಪಟ್ಟ ಹಿರಿಮೆಯದಾದರೂ ರಾಜ-ರಾಣಿಯರು ಅಪೇಕ್ಷಿಸಿದಾಗ ಅರ್ಥಾತ್ ಪೂಜಾಸಂದರ್ಭಗಳಲ್ಲಿ ಅಥವಾ ಇತರ ಸ್ಥಳಗಳಿಂದ ವಿದ್ವಾಂಸರು ಬಂದಾಗ ಅವರೆದುರಿನಲ್ಲಿ ಆಸ್ಥಾನವಿದ್ವಾಂಸರು ತಮ್ಮ ಕಲಾಪ್ರೌಢಿಮೆಯನ್ನು ತೋರಿಸಬೇಕಾಗುತ್ತಿತ್ತು. ಅಷ್ಟಲ್ಲದೆ ಕಲಾವಿದ ಉದ್ದನೆಯ ಕೋಟು (Long coat) ಪೇಟ ಇತ್ಯಾದಿಗಳನ್ನು ಧರಿಸಿ ಹೋಗಬೇಕಾದ್ದು ನಿಯಮವಾಗಿದ್ದಿತು. ಅಷ್ಟಲ್ಲದೆ ಮಹಾಸ್ವಾಮಿಗಳೆದುರು ನಶ್ಯ ಹಾಕುವಂತಿರಲಿಲ್ಲ. ವೆಂಕಟಸುಬ್ಬಯ್ಯನವರಿಗಾದರೋ ನಶ್ಯದ ಅಭ್ಯಾಸವಿದ್ದಿತು. ಹಾಗೂ ಆಸ್ಥಾನಕ್ಕೆ ಹೋಗುವ ಸಲುವಾಗಿ ತಮ್ಮ ವೇಷಭೂಷಣಗಳನ್ನು ಬದಲಾಯಿಸುವ ಆಸ್ಥೆ ಅವರಿಗೆ ಇರಲಿಲ್ಲ. ಹೀಗಾಗಿ ಅವರು ಆಸ್ಥಾನವಿದ್ವಾಂಸರಾಗಲು ಒಪ್ಪಲಿಲ್ಲ.

'ಶಿಶುರ್ವೇತ್ತಿ ಪಶುರ್ವೇತ್ತಿ ವೇತ್ತಿಗಾನ ರಸಂಫಣಿ" ಎಂಬುದು ಪ್ರಸಿದ್ಧೋಕ್ತಿ. ಸಂಗೀತವು ಪಶುಪಕ್ಷಿಗಳನ್ನೂ, ಸರ್ಪಗಳನ್ನೂ, ಶಿಶುಗಳನ್ನೂ ಆಕರ್ಷಿಸುತ್ತದೆಂಬುದು ಇದರ ಅರ್ಥ. ಹಾಗೆ ವೆಂಕಟಸುಬ್ಬಯ್ಯನವರ ಸಂಗೀತ, ಸರ್ಪವೊಂದನ್ನು ಆಕರ್ಷಿಸಿದ ಪ್ರಸಂಗವಿದು. ಒಮ್ಮೆ ಮೂಗೂರಿನ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಕಚೇರಿ ನಡೆದಿದೆ. ವೆಂಕಟಸುಬ್ಬಯ್ಯನವರು ತಮ್ಮ ವಾದನದಲ್ಲೇ ತಲ್ಲೀನರಾಗಿದ್ದಾರೆ. ಶ್ರಾವಕರೆಲ್ಲ ಆ ಸಂಗೀತದ ಸವಿಯುಣ್ಣುತ್ತಾ ಮೈಮರೆತಿದ್ದಾರೆ. ಇದ್ದಕ್ಕಿದ್ದಂತೆ ಬಾಲಕನೊಬ್ಬ

ಕಿಟಾರೆಂದು ಕಿರುಚಿದ. ಎಲ್ಲರೂ ಕಣ್ಬಿಟ್ಟು ನೋಡಿದರೆ ದೊಡ್ಡ ಹಾವೊಂದು ಹೆಡೆಯಾಡಿಸುತ್ತಾ ಕುಳಿತಿದೆ. ಜನರು ದಿಗ್ಗನೆದ್ದು ಭಯದಿಂದ ಸರ್ಪಕ್ಕೆ ನಮಸ್ಕಾರ ಮಾಡಿದರು. ಇದ್ದಕ್ಕಿದ್ದಂತೆ ಉಂಟಾದ ಗದ್ದಲದಿಂದ ವೆಂಕಟಸುಬ್ಬಯ್ಯ, ವಾದನವನ್ನು ನಿಲ್ಲಿಸಿ ಕಣ್ತೆರೆದರು. ವಾದನ ನಿಂತಂತೆ ಹಾವು ಯಾರಿಗೂ ತೊಂದರೆ ಕೊಡದೆ ಹೊರಟುಹೋಯಿತು. ಇದನ್ನು ಕಂಡ ಜನ ವೆಂಕಟಸುಬ್ಬಯ್ಯನವರ ಪಿಟೀಲಿನ ನಾದವಿಶೇಷಕ್ಕೆ ಸರ್ಪವೂ ಮನಸೋತಿತಲ್ಲ ! ಎಂದು ಕೊಂಡಾಡಿದರು.

ತುಂಬಿದ ಸಭೆಯೊಂದರಲ್ಲಿ ನಡೆದ ಮೈಸೂರು ಟಿ.ಚೌಡಯ್ಯನವರ ಕಚೇರಿಯ ಬಗೆಗೆ ಶ್ರಾವಕರು ಮೆಚ್ಚುಗೆಯ ಮಾತನಾಡಿದಾಗ ಚೌಡಯ್ಯನವರೆಂದರಂತೆ - 'ನನ್ನ ಪಿಟೀಲು ವಾದನವನ್ನೇನು ಇಷ್ಟು ಹೊಗಳುತ್ತೀರಿ ? ವೆಂಕಟಸುಬ್ಬಯ್ಯನವರು ನನಗಿಂತ ಅದ್ಭುತವಾಗಿ ನುಡಿಸಬಲ್ಲರು.' ಚೌಡಯ್ಯನವರ ಈ ನುಡಿ ಅವರ ಹೃದಯ ವೈಶಾಲ್ಯಕ್ಕೆ ನಿದರ್ಶನವಷ್ಟೇ ಅಲ್ಲ, ವೆಂಕಟಸುಬ್ಬಯ್ಯನವರ ಪಾಂಡಿತ್ಯಕ್ಕೂ ಪಿಟೀಲುವಾದನ ಶೈಲಿಗೂ ಒಂದು ಜೀವಂತ ಸಾಕ್ಷಿಯೂ ಹೌದು.

ಅಮೆರಿಕ ದೇಶದವರು ಪಿ.ಎಲ್ ೪೮೦ ಎಂಬ ಒಂದು ಯೋಜನೆಯನ್ನು ನಿಯೋಜಿಸಿದ್ದರು. ಈ ಯೋಜನೆಯಡಿ ವಿದ್ಯಾಸಂಸ್ಥೆಗಳಿಗೆ ಧನಸಹಾಯ ನೀಡಲಾಗುತ್ತಿತ್ತು. ಇಂತಹ ಧನಸಹಾಯವನ್ನು ನರಸೀಪುರದ ವಿದ್ಯಾಶಾಲೆ ಕೂಡ ಪಡೆಯುತ್ತಿತ್ತು. ಹೀಗೆ ಪಡೆದ ಹಣವನ್ನು ವಿದ್ಯಾಸಂಸ್ಥೆಗಳು ಸೂಕ್ತ ರೀತಿಯಲ್ಲಿ ಬಳಸುತ್ತಿವೆಯೇ ಎಂಬುದನ್ನು ತಪಾಸಿಸಲು ಆ ದೇಶದ

ಸದಸ್ಯರನ್ನೊಳಗೊಂಡ ಸಮಿತಿಯೊಂದು ಇದ್ದಿತು. ಈ ಸಮಿತಿ ಧನಸಹಾಯಪಡೆದ ಸಂಸ್ಥೆಗಳಿಗೆ ಆಗಿಂದಾಗ್ಗೆ ಭೇಟಿನೀಡಿ ತಮ್ಮ ಕಾರ್ಯನಿರ್ವಹಣೆ ಮಾಡುತ್ತಿದ್ದಿತು. ಒಮ್ಮೆ ಇಂತಹ ಸಮಿತಿಯೊಂದು ಭಾರತಕ್ಕೆ ಭೇಟಿಯಿತ್ತಾಗ ನಮ್ಮ ಮೈಸೂರಿಗೂ ಬಂದಿದ್ದಿತು. ಈ ವಿಷಯ ಅಂದು ನರಸೀಪುರದ ಶಾಲೆಯ ಅಧ್ಯಾಪಕವೃಂದದಲ್ಲಿ ಒಬ್ಬರಾಗಿದ್ದ ಶ್ರೀ ಜಿ.ಕೆ.ವೆಂಕಟರಾಮಯ್ಯನವರಿಗೆ ತಿಳಿದಿತ್ತು. ವೆಂಕಟರಾಮಯ್ಯನವರು ತಮ್ಮ ಶಾಲೆಯ ಪ್ರತಿನಿಧಿಯಾಗಿ, ಅಮೆರಿಕದಿಂದ ಬಂದಿದ್ದ ಸಮಿತಿಯನ್ನು ತಮ್ಮ ಶಾಲೆಗೂ ಬರುವಂತೆ ಆಹ್ವಾನಿಸಿದರು. ಈ ಆಹ್ವಾನದ ಹಿನ್ನೆಲೆಯಲ್ಲಿ ತಮ್ಮ ಸಂಸ್ಥೆಯ ಪುರೋಭಿವೃದ್ಧಿಗೆ ಸಹಾಯ ನೀಡುತ್ತಿದ್ದ ಅಮೆರಿಕನ್ನರ ಬಗೆಗೆ ಗೌರವವೂ, ತಮ್ಮ ಶಾಲೆಯನ್ನು ನೋಡಿ ಅವರು ಮೆಚ್ಚುಗೆಯ ಎರಡು ಮಾತಗಳನ್ನಾಡಲಿ ಎಂಬ ಅಪೇಕ್ಷೆಯೂ ವೆಂಕಟರಾಮಯ್ಯನವರಿಗಿದ್ದಿತು. ಅಲ್ಲದೆ ಸ್ಥಳೀಯ ವಿದ್ವಾಂಸರಾಗಿದ್ದ ವೆಂಕಟಸುಬ್ಬಯ್ಯನವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮವನ್ನು ಸಮಿತಿಯೆದುರು ಏರ್ಪಡಿಸಬಹುದು ಎಂಬ ಅಭಿಲಾಷೆಯೂ ಇದ್ದಿತು. ಈ ವಿಷಯವನ್ನು ಶಾಲೆಯ ಆಡಳಿತಮಂಡಲಿಯೊಡನೆ ಚರ್ಚಿಸಿದ ನಂತರ ವೆಂಕಟ ರಾಮಯ್ಯನವರು ಸಮಿತಿಯನ್ನು ತಮ್ಮ ಶಾಲೆಗೆ ಆಹ್ವಾನಿಸಿದ್ದರು. ಸಮಿತಿಯ ಮುಖ್ಯಸ್ಥ ಈ ಸಂದರ್ಭದಲ್ಲಿ ಷರತ್ತೊಂದನ್ನು ಹೀಗೆ ಒಡ್ಡಿದರು. 'ನಾವು ನಿಮ್ಮಲ್ಲಿಗೆ ಬಂದಾಗ ಭಾರತೀಯ ಸಂಸ್ಕೃತಿಯನ್ನು ಹೊರಸೂಸುವ ಸಾಂಸ್ಕೃತಿಕ ಕಾರ್ಯಕ್ರಮವೊಂದನ್ನು ನೀವು ನಿಯೋಜಿಸುವುದಾದರೆ ಮಾತ್ರ ನಾವು

ಈಗ ನಿಮ್ಮಲ್ಲಿಗೆ ಬರುತ್ತೇವೆ' ಎಂದರು. ರೋಗಿ ಬಯಸಿದ್ದೂ ಹಾಲನ್ನ, ವೈದ್ಯಹೇಳಿದ್ದೂ ಹಾಲನ್ನ ಎಂಬಂತಾಯಿತು ಸಂದರ್ಭ. ಹೀಗಾಗಿ ಸಮಿತಿಯ ನೇತಾರನ ಮಾತುಗಳಿಂದ ವೆಂಕಟರಾಮಯ್ಯನವರಿಗೆ ಸಂತೋಷವೇ ಆಯಿತು. 'ಖಂಡಿತಾ ಕಾರ್ಯಕ್ರಮ ಏರ್ಪಡಿಸುತ್ತೇವೆ, ಬನ್ನಿ' ಎಂದು ಮತ್ತೊಮ್ಮೆ ಅವರನ್ನು ಆಹ್ವಾನಿಸಿ ದಿನಾಂಕವನ್ನು ಗೊತ್ತುಮಾಡಿದರು.

ಅನಂತರ ಕಾರ್ಯಕ್ರಮ ನೀಡುವಂತೆ ಕೋರಲು ವೆಂಕಟ ರಾಮಯ್ಯನವರು, ವೆಂಕಟಸುಬ್ಬಯ್ಯನವರಲ್ಲಿಗೆ ಹೋದರು. ವಿಷಯವನ್ನು ವೆಂಕಟಸುಬ್ಬಯ್ಯನವರಲ್ಲಿ ತಿಳಿಸಿದಾಗ ಅವರು ಕೂಡಲೇ ಒಪ್ಪಿಕೊಳ್ಳಲಿಲ್ಲ. ಮಾಮೂಲಿನ ಸಂಕೋಚ, ಅಧೈರ್ಯಗಳು ಅವರನ್ನು ಕಾಡಿದ್ದಿರಬಹುದು. ಆದರೆ ಅವರ ವಾದನಸುಧೆಯನ್ನು ಅರಿತಿದ್ದ ವೆಂಕಟರಾಮಯ್ಯ ಅವರನ್ನು ಮತ್ತೆ ಮತ್ತೆ ಒತ್ತಾಯ ಪಡಿಸುತ್ತಾ ಹೀಗೆಂದರು ; 'ವಿದ್ವಾಂಸರೆ, ನಿಮ್ಮ ಕಾರ್ಯಕ್ರಮಕ್ಕೆ ಅಮೆರಿಕದ ಸಮಿತಿಸದಸ್ಯರು ಹಾಗೂ ಶಾಲೆಯ ಆಡಳಿತ ಮಂಡಲಿ ಸದ್ಯಸರ ವಿನಾ ಹೊರಗಿನ ಹೆಚ್ಚು ಜನರಿರುವುದಿಲ್ಲ. ತಾವು ಒಂದು ಗಂಟೆಯ ಕಾರ್ಯಕ್ರಮವನ್ನು ಖಂಡಿತವಾಗಿ ನಡೆಸಿಕೊಡಬೇಕು. ಆ ಮೂಲಕ ಕರ್ನಾಟಕಶಾಸ್ತ್ರೀಯಸಂಗೀತವನ್ನು ಸ್ವಲ್ಪಮಟ್ಟಿಗೆ ವಿದೇಶೀಯರಿಗೆ ತಿಳಿಸಿದಂತಾಗುತ್ತದೆ. ಅಷ್ಟೇ ಅಲ್ಲದೆ ನಮ್ಮ ದೇಶದ, ಅದರಲ್ಲೂ ನರಸೀಪುರದ ಹೆಗ್ಗಳಿಕೆಯೂ ವಿಶೇಷವಾಗಿ ನಿಲ್ಲುತ್ತದೆ. ಆದ್ದರಿಂದ ತಾವು ದೊಡ್ಡಮನಸ್ಸು ಮಾಡಿ ಕಾರ್ಯಕ್ರಮ ನಡೆಸಿಕೊಡಿ' ಎಂದು ಒತ್ತಾಯಪೂರ್ವಕವಾಗಿ ಆಹ್ವಾನಿಸಿದರು. ಕಡೆಗೆ ಗತ್ಯಂತರವಿಲ್ಲದೆ ವೆಂಕಟಸುಬ್ಬಯ್ಯನವರು ಒಪ್ಪಲೇ

ಬೇಕಾಯಿತು. ಸರಿ, ನಿಗದಿತ ದಿನದಂದು ನಿಗದಿತ ಸಮಯಕ್ಕೆ ಬಂದು ವೆಂಕಟಸುಬ್ಬಯ್ಯನವರು ಕಾರ್ಯಕ್ರಮ ನೀಡಿದರು. ಸಮಿತಿಯ ಸದಸ್ಯರೆಲ್ಲ 'ಇದೆಂತಹ ಅದ್ಭುತ ಸಂಗೀತ !' ಎಂದು ಹೃತ್ಪೂರ್ವಕವಾಗಿ ಹೊಗಳುತ್ತಾ ಸ್ವಾನಂದಘೋಷ ಮಾಡಿದರು. ಅವರೆಲ್ಲ ಅನಂತರ ನಿಂತು ಬಹಳ ಹೊತ್ತಿನವರೆಗೆ ಕರತಾಡನ ಮಾಡುತ್ತಲೇ ಇದ್ದರು.

ಇನ್ನು ಸಂಗೀತ ಕ್ಷೇತ್ರದಲ್ಲೇನೂ ಹೆಸರಾಂತ ಕಲಾವಿದರಲ್ಲದಿದ್ದರೂ, ಹಳೆಯ ಮೈಸೂರು ಸರ್ಕಾರದ ಅತ್ಯಂತ ದಕ್ಷ ಅಧಿಕಾರಿಗಳೆನಿಸಿದ್ದ ನವರತ್ನ ರಾಮರಾಯರು ಕಲಾರಸಿಕರಲ್ಲಿ ಒಬ್ಬರು. ಹಲವಾರು ಸಂಗೀತ ಕಚೇರಿಗಳನ್ನು ಕೇಳಿ ಅವುಗಳ ಮಟ್ಟವನ್ನು ನಿಷ್ಪಕ್ಷಪಾತವಾಗಿ ತೀರ್ಮಾನಿಸುತ್ತಿದ್ದ ಅವರಿಗೆ ಪಿಟೀಲು ವಾದನದಲ್ಲಿ ಸ್ವಲ್ಪ ಪರಿಶ್ರಮವೂ ಇದ್ದಿತು. ಅಂತಹವರು ವೆಂಕಟಸುಬ್ಬಯ್ಯನವರನ್ನು ಕುರಿತು 'ಕೆಲವು ನೆನಪುಗಳು' ಎಂಬ ತಮ್ಮ ಪುಸ್ತಕದಲ್ಲಿ ಹೀಗೆ ಅಭಿಪ್ರಾಯಪಟ್ಟಿದ್ದಾರೆ.

"ನರಸೀಪುರದಲ್ಲಿ ನಡೆದ ಒಂದು ರಾಮಭಜನೆಯ ಸಂದರ್ಭದಲ್ಲಿ ಆಲಗೂಡು ಗ್ರಾಮದ ಶ್ಯಾನುಭೋಗನಾಗಿದ್ದ ವೆಂಕಟಸುಬ್ಬಯ್ಯನೆಂಬ ಯುವಕ ಪಿಟೀಲು ನುಡಿಸಿದ್ದನ್ನು ಕೇಳಿ ನನಗೆ ಬಹಳ ಆಶ್ಚರ್ಯವಾಯಿತು. ಈ ತರಹದ ಮಧುರವಾದನವನ್ನು ನಾವು ಹೆಚ್ಚೆಂದರೆ ಇಬ್ಬರು ಮೂವರಿಂದ ಕೇಳಿರಬಹುದಷ್ಟೆ. ನೀವು ದ್ವಾರಂ ವೆಂಕಟಸ್ವಾಮಿನಾಯ್ಡು ಅವರ ವಾದನವನ್ನು ಕೇಳಿದ್ದೀರಷ್ಟೆ? ನಾನು ಅದನ್ನು ಮೊದಲು ಕೇಳಿದಾಗ ಪ್ರಕಾಶಕ್ಕೆ ಬಾರದ ನಮ್ಮ ವೆಂಕಟಸುಬ್ಬಯ್ಯನ ನೆನಪು ಬಂದಿತು. ಅವನು ಶ್ರೇಷ್ಠ ದರ್ಜೆಯ

ಸಂಗೀತಗಾರ. ನಾನೂ, ವೆಂಕಟಸುಬ್ಬಯ್ಯನ ವಾದನವನ್ನು ಕೇಳಿದ ರಸಿಕರಾದ ನನ್ನ ಕೆಲವು ಸ್ನೇಹಿತರೂ ಬಹುದಿನದಿಂದಲೂ ವಿಮರ್ಶೆ ಮಾಡಿ ಈ ಅಭಿಪ್ರಾಯಕ್ಕೆ ಬಂದಿದ್ದೇವೆ."

ವೆಂಕಟಸುಬ್ಬಯ್ಯನವರು ಖ್ಯಾತಿಯನ್ನು ಬಯಸಲೂ ಇಲ್ಲ, ಅದು ಅವರ ಪಾಲಿಗೆ ಬರಲೂ ಇಲ್ಲ. ಮೋಡದ ಮರೆಯ ಚಂದ್ರನಂತಿದ್ದರವರು. ಆದರೆ ಆತ್ಮೋನ್ನತಿಯ ಗುರಿಯಿಂದ ಕಲಿತು ಅಭ್ಯಸಿಸಿದ ಅವರ ವಾದನದಲ್ಲಿ ಅಮೃತ ಸುರಿಯುತ್ತಿತ್ತು. ಆದ್ದರಿಂದಲೇ ಅವರ ಪಿಟೀಲು ವಾದನದ ಸೊಬಗನ್ನು ಅನುಭವಿಸ ಬಯಸಿದವರು ರಾತ್ರಿ ಅವರ ಮನೆಯಲ್ಲೇ ಮಲಗುವ ನೆಪಮಾಡಿಕೊಂಡು ಉಳಿಯುತ್ತಿದ್ದರು. ಮಲಗಿ ನಿದ್ರೆ ಬಂದವರಂತೆ ನಟಿಸುತ್ತಾ ಮಧ್ಯ ರಾತ್ರಿಯಲ್ಲಿ ಎದ್ದು ಮ್ಯೂಟ್ ಹಾಕಿಕೊಂಡು ವೆಂಕಟಸುಬ್ಬಯ್ಯನವರು ನುಡಿಸುತ್ತಿದ್ದುದನ್ನು ಕೇಳಿ ಆನಂದಿಸುತ್ತಿದ್ದರು. (ಮ್ಯೂಟ್ ಎಂಬುದು ಪಿಟೀಲಿನ ನಾದಘೋಷವನ್ನು ಕಡಿಮೆ ಮಾಡುವ ಒಂದು ಸಾಧನ).

ತಿರುಮಕೂಡಲ ನರಸೀಪುರವು ಅಗಸ್ತ್ಯಕ್ಷೇತ್ರವೆಂದು ಪ್ರಸಿದ್ಧಿ. ಅಗಸ್ತ್ಯ ಋಷಿಗಳೇ ಈ ಊರನ್ನು ಸ್ಥಾಪಿಸಿದ್ದಾರೆಂಬ ಪ್ರತೀತಿಯೂ ಉಂಟು. ಇದು ಕಾವೇರಿ, ಕಪಿಲಾ ಮತ್ತು ಸ್ಫಟಿಕವೆಂಬ ಮೂರು ನದಿಗಳ ಸಂಗಮಸ್ಥಾನ. ನದಿಗಳ ದಡದಲ್ಲೇ ವೆಂಕಟಸುಬ್ಬಯ್ಯನವರ ಮನೆಯಿದ್ದುದು. ಹೀಗಾಗಿ ಜೀವಾಧಾರವಾದ ನೀರಿಗಾಗಿ ಊರಿನ ಜನರೆಲ್ಲ ಪ್ರತಿದಿನವೂ ನದಿಯ ಬಳಿ ಬರುತ್ತಿದ್ದರು. ಹೀಗೆ ಬಂದವರೆಲ್ಲ ವೆಂಕಟಸುಬ್ಬಯ್ಯನವರ ಸಂಗೀತದ ಸುಧೆ ಸವಿದು ಹಿಂತಿರುಗುತ್ತಿದ್ದರು. ಇದು ಪ್ರತಿದಿನದ ವಾಡಿಕೆಯಾಗಿದ್ದಿತು.

ವೆಂಕಟಸುಬ್ಬಯ್ಯನವರು ಪ್ರಾಯದಲ್ಲಿ ನುಡಿಸುತ್ತಿದ್ದಷ್ಟೇ ಮಧುರವಾಗಿ ತಮ್ಮ ಇಳಿವಯಸ್ಸಿನಲ್ಲೂ ಪಿಟೀಲು ನುಡಿಸುತ್ತಿದ್ದರು. ಆದರೆ ವೃದ್ಧಾಪ್ಯದಿಂದಾಗಿ ಸಹಜವಾದ ಅಶಕ್ತತೆ ಅವರಲ್ಲಿದ್ದಿತು. ಮೊದಲಿನಿಂದಲೂ ಅರ್ಥಾತ್ ವೆಂಕಟಸುಬ್ಬಯ್ಯನವರ ತಾರುಣ್ಯದಿಂದಲೂ ಅವರ ವಾದನವನ್ನು ಕೇಳಿದ್ದ ಮೃದಂಗ ವಿದ್ವಾನ್ ಟಿ.ಎಂ.ಪುಟ್ಟಸ್ವಾಮಯ್ಯನವರು ಸ್ವಾರಸ್ಯವಾಗಿ ಹೀಗೆನ್ನುತ್ತಿದ್ದರು. "ಏನ್‌ದೇವ್ರು, ನಿಮಗೆ ವಯಸ್ಸಾಯ್ತೇ ವಿನಹ ಪಿಟೀಲು ನುಡಿಸೋ ನಿಮ್ಮ ಕೈಗಳ್ಗೆ ವಯಸ್ಸೇ ಆಗಿಲ್ವಲ್ಲಾ ?" ಪುಟ್ಟಸ್ವಾಮಯ್ಯನವರ ಈ ಮಾತಿನಲ್ಲಿ ಸತ್ಯವೂ ಇತ್ತು. ವೆಂಕಟಸುಬ್ಬಯ್ಯನವರ ವಾದನಕೌಶಲ ಇದೀಗ ಇನ್ನೂ ಪಕ್ವಗೊಂಡಿದ್ದಿತು. ಆದ್ದರಿಂದ ಅದು ಈಗ ಮತ್ತಷ್ಟು ಮಾಧುರ್ಯಪೂರ್ಣವಾಗಿದ್ದಿತು.

ಹೀಗೆ ಪಂಡಿತ ಪಾಮರರೆಲ್ಲರ ಮೆಚ್ಚುಗೆಗೆ ಪಾತ್ರರಾದ ವೆಂಕಟಸುಬ್ಬಯ್ಯನವರು ತಮ್ಮ ಜೀವಿತದ ಬಹುಭಾಗವನ್ನು ನಾದೋಪಾಸನೆಗೆ ಮೀಸಲಿರಿಸಿದುದು ದಿಟ. ಆದರೆ ಪ್ರಾಪಂಚಿಕ ಬದುಕನ್ನವರು ಪೂರ್ಣ ವರ್ಜಿಸಿದವರಲ್ಲ. ವೃತ್ತಿಯಲ್ಲವರು ಶಾನುಭೋಗರಾಗಿದ್ದರು. ತಮ್ಮ ಹುಟ್ಟೂರಿನ ಬಳಿಯಿದ್ದ ಆಲಗೂಡು ಗ್ರಾಮದ ಶಾನುಭೋಗರಿವರು. ಪ್ರವೃತ್ತಿಯಲ್ಲಿ ಸಂಗೀತಜ್ಞರಾಗಿದ್ದವರು. ಆದರೆ ವೃತ್ತಿಯಲ್ಲಾಗಲೀ, ಪ್ರವೃತ್ತಿಯಲ್ಲಾಗಲೀ ಯಾವುದೇ ಅನ್ಯಾಯಮಾಡದೆ ಧರ್ಮಮಾರ್ಗದಲ್ಲಿ ನಡೆದವರು. ಸಾಂಸಾರಿಕ ಜೀವನದಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದ ಸುಬ್ಬಯ್ಯನವರಿಗೆ ಮೂವರು ಪುತ್ರಿಯರು. ಹಿರಿಯ ಮಗಳು ಪಾರ್ವತಮ್ಮ, ಎರಡನೆಯಾಕೆ ಸೀತಮ್ಮ, ಮೂರನೇ ಮಗಳು

ಲಕ್ಷಮ್ಮ. ಈ ಮೂವರಿಗೂ ಸೂಕ್ತವಯಸ್ಸಿನಲ್ಲಿ ವೆಂಕಟಸುಬ್ಬಯ್ಯ ವಿವಾಹಮಾಡಿ ತಮ್ಮ ಕರ್ತವ್ಯ ನಿರ್ವಹಣೆ ಮಾಡಿದ್ದರು. ಮೂವರು ಅಳಿಯಂದಿರೂ ಮಾವನವರೆಡೆಗೆ ಮಕ್ಕಳಿಗಿಂತ ಅಧಿಕವಾಗಿ ಪ್ರೀತ್ಯಾದರಗಳನ್ನೂ ಗೌರವವನ್ನೂ ತೋರುತ್ತಿದ್ದರು. ಹೆಣ್ಣುಮಕ್ಕಳೆಲ್ಲ ಹುಟ್ಟಿನಿಂದಲೇ ತಂದೆಯಂತೆಯೇ ಸೌಜನ್ಯದ ಮೂರ್ತಿಗಳಾದವರು.

ಹಿಂದೂಧರ್ಮದಲ್ಲಿ ಗೃಹಸ್ಥನಾದವನಿಗೆ ಮುಖ್ಯವಾಗಿ ಐದು ಯಜ್ಞಗಳನ್ನು ವಿಧಿಸಲಾಗಿದೆ. ಅವೆಂದರೆ ಬ್ರಹ್ಮಯಜ್ಞ, ದೇವಯಜ್ಞ, ಪಿತೃಯಜ್ಞ, ಭೂತಯಜ್ಞ ಮತ್ತು ಮನುಷ್ಯಯಜ್ಞಗಳು. ಬ್ರಹ್ಮಯಜ್ಞವೆಂದರೆ ಗೃಹಸ್ಥನು ವೇದಾಧ್ಯಯನ ಮತ್ತು ಅಧ್ಯಾಪನಗಳನ್ನು ಮಾಡುವ ಮೂಲಕ ಋಷಿಮುನಿಗಳ ಸೇವೆಮಾಡಿ ಅವರ ಅನುಗ್ರಹಕ್ಕೆ ಪಾತ್ರನಾಗುವುದು. ದೇವಯಜ್ಞವೆಂದರೆ ಹೋಮಾದಿಗಳು ; ಹೋಮಾಗ್ನಿಯ ಮೂಲಕ ಹವಿಸ್ಸನ್ನು ದೇವತೆಗಳಿಗೆ ಅರ್ಪಿಸುವುದು. ಪಿತೃಯಜ್ಞವೆಂಬುದು ಮರಣಾನಂತರ ಸ್ವರ್ಗವಾಸಿಗಳಾದ ಹಿರಿಯರು ತಾವು ತಮ್ಮ ಜೀವಿತಕಾಲದಲ್ಲಿ ಸಂಗ್ರಹಿಸಿದ್ದ ವಿದ್ಯೆ, ಸಂಸ್ಕೃತಿ, ಸುಖಸಂಪತ್ತುಗಳನ್ನು ತಮ್ಮ ವಂಶಜರಿಗೆ ಅರ್ಥಾತ್ ಮುಂದಿನ ಪೀಳಿಗೆಗೆ ಅನುಗ್ರಹಿಸುತ್ತಾರೆ. ಈ ಕಾರಣದಿಂದ ಗೃಹಸ್ಥನು ಕೃತಜ್ಞತಾಪೂರ್ವಕವಾಗಿ ಅವರ ಶ್ರಾದ್ಧಾದಿಕಾರ್ಯಗಳನ್ನು ಮಾಡುವ ಮೂಲಕ ಸ್ವರ್ಗವಾಸಿಗಳನ್ನು ಸ್ಮರಿಸಬೇಕೆಂಬುದು. ಭೂತಯಜ್ಞವು ಪಶುಪಕ್ಷಿಗಳೇ ಮುಂತಾದ ಜೀವಿಗಳಿಗೆ ಆಹಾರ ದೊರೆಯುವಂತೆ ಮಾಡುವುದು. ಈ ಜೀವಿಗಳಲ್ಲೂ ಭಗವಂತನು ಅಂತರ್ಯಾಮಿಯಾಗಿದ್ದಾನೆಂಬ ನಂಬಿಕೆ

ಇದಕ್ಕೆ ಮೂಲ. ಇನ್ನು, ಮನುಷ್ಯಯಜ್ಞವು ಎಲ್ಲರನ್ನೂ ತನ್ನವರಂತೆ ಕಾಣುತ್ತಾ ಸ್ನೇಹಸಹಕಾರಗಳಿಂದ ಬಾಳುವುದು. ವೆಂಕಟಸುಬ್ಬಯ್ಯನವರು ಈ ಎಲ್ಲ ಯಜ್ಞಗಳನ್ನೂ ಚಾಚೂ ತಪ್ಪದಂತೆ ನಡೆಸಿದರು. ಅದರಲ್ಲೂ ಅವರು ಆಚರಿಸಿದ ಬ್ರಹ್ಮಯಜ್ಞವು ವಿಶಿಷ್ಟವಾದುದು. 'ಪಂಚಮವೇದ' ಎಂದು ಕರೆಯಲ್ಪಡುವ ಸಂಗೀತವೇದವನ್ನು ಅವರು ಅಧ್ಯಯನ ಮತ್ತು ಅಧ್ಯಾಪನ ಮಾಡಿದರು. ತಾವು ಪಡೆದ ಸುಜ್ಞಾನವನ್ನು ಇತರರಿಗೂ ತಿಳಿಸಿದರು. ತನ್ಮೂಲಕ ವಿದ್ಯಾರಕ್ಷಣೆ ಮತ್ತು ಪೋಷಣೆ ಮಾಡಿದರು. ಇದನ್ನೇ 'ಆಚಾರ್ಯಋಣ'ವೆಂದೂ ಅಥವಾ 'ಋಷಿ ಋಣ'ವೆಂದೂ ಕರೆಯುವುದು. ಗುರುವಿನಿಂದ ತಾನು ಕಲಿತ ವಿದ್ಯೆಯನ್ನು ಮತ್ತೊಬ್ಬರಿಗೆ ಹೇಳಿ ಕೊಡುವ ಮೂಲಕ ಒಬ್ಬನು ಋಣಮುಕ್ತನಾಗಬಹುದು. ನಮ್ಮ ವೆಂಕಟಸುಬ್ಬಯ್ಯನವರು ತಮ್ಮ ಗುರು ಋಣವನ್ನು ಎರಡು ವಿಧದಲ್ಲಿ ಪೂರೈಸಿದರು. ಶ್ರೀನಿವಾಸ ಅಯ್ಯಂಗಾರರು, ಮುತ್ತುಸ್ವಾಮಿಗಳು, ನರಸೀಪುರದ ಬಳಿಯಿರುವ ತುಂಬಲಗ್ರಾಮದ ಕೆಲವರು, ನಿಯೋಫಾರ್ಮಸಿ ಡಾ.ಸುಬ್ರಹ್ಮಣ್ಯ ಅಯ್ಯರರ ಮಕ್ಕಳು ಲೀಲಾ, ಪುಷ್ಪ ಹಾಗೂ ತಮ್ಮ ಮಕ್ಕಳು ಮತ್ತು ಮೊಮ್ಮಕ್ಕಳಿಗೆ ಗಾಯನ, ವಾದನಗಳನ್ನು ಹೇಳಿಕೊಡುವ ಮೂಲಕ ಒಂದು ವಿಧವಾದರೆ, ಗುರು ಭಿಕ್ಷಾನ್ನ ಶಾಮಣ್ಣನವರನ್ನು ಅವರ ಜೀವಿತಾಂತ್ಯಕಾಲದಲ್ಲಿ ತಮ್ಮ ಮನೆಯಲ್ಲೇ ಇರಿಸಿಕೊಂಡು ಸೇವೆ ಮಾಡುವ ಮೂಲಕ ಮತ್ತೊಂದು ವಿಧದಲ್ಲೂ ಆಚಾರ್ಯಋಣಮುಕ್ತರಾದರು. ಶಾಮಣ್ಣನವರು ದೈವಾಧೀನರಾದಾಗ ಅವರ ಬಂಧುಬಳಗದವರಾರೂ ಇರಲಿಲ್ಲ. ಹೀಗಾಗಿ ವೆಂಕಟಸುಬ್ಬಯ್ಯನವರೇ ವಿಧಿವತ್ತಾಗಿ ಶಾಮಣ್ಣನವರ ಸಂಸ್ಕಾರಾದಿಗಳೆಲ್ಲವನ್ನೂ

ನಡೆಸಿದರು. ನಾದೋಪಾಸನೆಯಿಂದಾಗಿ ಭಗವತ್ಕೃಪೆ, ಗುರುಸೇವೆಯಿಂದಾಗಿ ಗುರುಗಳ ಕೃಪಾಕಟಾಕ್ಷಕ್ಕೆ ಸಂಪೂರ್ಣ ಪಾತ್ರರಾದರು, ವೆಂಕಟಸುಬ್ಬಯ್ಯನವರು.

ಇಂತಹ ಮಹನೀಯರ ಜೀವಿತಾಂತ್ಯ ಅಪೂರ್ವವಾಗಿ ಕಳೆಯಿತು. ಸುಮಾರು ಎಂಭತ್ತು ವಸಂತಗಳನ್ನು ಕಂಡಿದ್ದ ವೆಂಕಟಸುಬ್ಬಯ್ಯನವರು ಜೀವಿತದ ತಮ್ಮ ಕೊನೆಯದಿನಗಳನ್ನು ಮಗಳು ಲಕ್ಷ್ಮಮ್ಮನವರ ಮನೆಯಲ್ಲಿ ಕಳೆದರು. ಈ ಅವಧಿಯನ್ನು ಮಕ್ಕಳೊಂದಿಗೆ ಕಳೆಯುವುದು ಸೂಕ್ತವೆಂದು ನಿರ್ಧರಿಸಿ ಕೈಯಲ್ಲಿ ಪಿಟೀಲೊಂದನ್ನು ಮಾತ್ರ ಹಿಡಿದುಕೊಂಡು ಮಗಳ ಮನೆಯೆಡೆ ಬಂದರು. ಮನೆ ಬಾಗಿಲಲ್ಲೇ ನಿಂತು "ಮಗೂ" ಎಂದು ಕರೆದರು. ಲಕ್ಷ್ಮಮ್ಮ ಹೊರ ಬಂದು ನೋಡಿದರೆ ತಂದೆ ಪಿಟೀಲು ಹಿಡಿದು ಬಾಗಿಲಲ್ಲಿ ನಿಂತಿದ್ದಾರೆ! ಆಶ್ಚರ್ಯವೂ ಸಂಭ್ರಮವೂ ಆಕೆಗೆ ಏಕ ಕಾಲದಲ್ಲುಂಟಾಗಿ ತಂದೆಯವರನ್ನು ಕುರಿತು ಆಕೆ ಹೀಗೆಂದರು, "ಅಣ್ಣಾ ಒಳಗೆ ಬನ್ನಿ. ಇದೇಕೆ ಇಲ್ಲೇ ನಿಂತಿರಿ ?". ಆಕೆಯ ಪ್ರಶ್ನೆಗೆ ಉತ್ತರವೀಯದ ವೆಂಕಟಸುಬ್ಬಯ್ಯನವರು "ಮಗೂ, ನಾನು ನಿನ್ನ ಮನೆಯಲ್ಲಿ ಸಾಯಬಹುದೇ ಹೇಳು" ಎಂದರು.

ಲಕ್ಷ್ಮಮ್ಮ ಸ್ವಲ್ಪ ವಿಚಲಿತರಾದರೂ ತೋರಗೊಡದೆ "ಇದೇನಣ್ಣಾ ಹೀಗೆನ್ನುತ್ತೀರಿ ? ಬನ್ನಿ ಒಳಕ್ಕೆ" ಎಂದರು.

ವೆಂಕಟಸುಬ್ಬಯ್ಯನವರು "ಒಳಬರುವುದು ಹಾಗಿರಲಿ ಮಗೂ, ಮೊದಲು ನೀನು ನನ್ನ ಪ್ರಶ್ನೆಗೆ ಉತ್ತರಿಸು" ಎಂದು ಪಟ್ಟು ಹಿಡಿದವರಂತೆ ನುಡಿದರು.

ಇಲ್ಲವೆಂದರಿತ ಲಕ್ಷಮ್ಮನವರು 'ಹಾಗೆಯೆ ಆಗಲಿ, ಒಳಕ್ಕೆ ಬನ್ನಿ ಮೊದಲು' ಎಂದು ತಮ್ಮ ಮಾತನ್ನು ಪುನರಾವರ್ತಿಸಿದರು. ಆಕೆಯ ಪತಿ ಹನುಮಂತರಾಯರೂ ಅಷ್ಟೇ ವಿಶ್ವಾಸದಿಂದ ಮಾವನವರನ್ನು ಒಳಕ್ಕೆ ಬರಮಾಡಿಕೊಂಡರು. ಸ್ವಲ್ಪ ವೇಳೆ ಎಲ್ಲರೂ ಕುಳಿತು ಮಾತನಾಡಿದರು. ಮಾತಿನ ಮಧ್ಯೆ ವೆಂಕಟಸುಬ್ಬಯ್ಯನವರು 'ಮಗೂ, ರಾತ್ರಿ ಮಲಗಲು ನನಗೆ ಹಾಸಿಗೆಯೇನೂ ಬೇಡಮ್ಮ' ಎಂದೆನ್ನುತ್ತಾ ಉದ್ದವಾದ ರಟ್ಟೊಂದನ್ನು ಹೊಲೆದುಕೊಂಡರು. ರಾತ್ರಿ ಅದನ್ನೇ ಹಾಸಿಗೆಯಾಗಿ ಹರಡಿಕೊಂಡರು. ಪಿಟೀಲಿನ ಪೆಟ್ಟಿಗೆಯೇ ದಿಂಬಾಯಿತು. ಮಲಗಿದರು. ಸ್ವಲ್ಪ ವೇಳೆಯಲ್ಲೇ ಪುನಃ ಎದ್ದು ಕುಳಿತು ಮ್ಯೂಟ್ ಹಾಕಿಕೊಂಡು ಸಂತ ತ್ಯಾಗರಾಜ ವಿರಚಿತ 'ಕಾಲಹರಣಮೇಲರಾ ಹರೇ' ಮತ್ತು 'ಬ್ರೋವಭಾರಮಾ' ಕೃತಿಗಳನ್ನು ಹೃದಯದುಂಬಿ ನುಡಿಸಲಾರಂಭಿಸಿದರು. ಅವರ ಕಣ್ಣಲ್ಲಿ ನೀರು ಹರಿಯುತ್ತಿತ್ತು. ವೆಂಕಟಸುಬ್ಬಯ್ಯನವರ ಇಂತಹ ಭಾವಾವೇಶಕ್ಕೆ ಅವರ ಮನಃಸ್ಥಿತಿಯೂ, ಕೃತಿಗಳ ಭಾವಾರ್ಥವೂ ಕಾರಣವಾಗಿದ್ದಿತು. ವಾಸ್ತವವಾಗಿ ಶ್ರೀ ತ್ಯಾಗರಾಜರು ಈ ರಚನೆಗಳಲ್ಲಿ ದೀನರಾಗಿ ದೇವರೆಡೆಗೆ ಹೀಗೆ ಮೊರೆಯಿಡುತ್ತಾರೆ, "ಶ್ರೀರಾಮನೇ, ಎಷ್ಟೇ ಸುತ್ತಾಡಿದರೂ ವೇಳೆಯಾದ ನಂತರ ಪಕ್ಷಿಗಳು ತಮ್ಮ ಆಶ್ರಯಸ್ಥಾನಕ್ಕೆ ಮರಳುವುದಿಲ್ಲವೇ ? ಅಂತೆಯೇ ನಿನ್ನೆಡೆಗಾಗಿ ಬಂದಿರುವ ನನ್ನನ್ನು ರಕ್ಷಿಸಲು ನಿನಗಿನ್ನೂ ತಾಮಸವೇಕೆ ? ದಿಕ್ಕಿಲ್ಲದಂತೆ ಅಲೆದು (ಕೊನೆಗೆ) ನನ್ನ ತನು ಮನ ಧನಗಳೆಲ್ಲವೂ ನಿನ್ನದೇ ಎಂದು ಶರಣಾದ ನನ್ನನ್ನು ರಕ್ಷಿಸು. ವಾಸುದೇವನೇ, ವಿಶ್ವವನ್ನೇ ನಿನ್ನ ಕುಕ್ಷಿಯಲ್ಲಿ ಅಡಗಿಸಿ ಕೊಂಡಿದ್ದೀಯೆ. ಹಾಗಿರುವ ನಿನಗೆ ನನ್ನೊಬ್ಬನನ್ನು

ರಕ್ಷಿಸುವುದು ಭಾರವಾದೀತೇ ? ಸಮುದ್ರ ಮಥನದ ವೇಳೆ ಸುರರಿಗಾಗಿ ನೀನು ಅಮೃತ ಸುರಿಸಲಿಲ್ಲವೇ ? ಗೋಪಿಯರಿಗಾಗಿ ಪರ್ವತವನ್ನೇ ಎತ್ತಿ ಹಿಡಿಯಲಿಲ್ಲವೇ ?" ಎಂದು ದೈನ್ಯದಿಂದ ಹಾಡಿದ್ದಾರೆ. ವೆಂಕಟಸುಬ್ಬಯ್ಯನವರು ತ್ಯಾಗರಾಜರ ಈ ಭಾವದೊಂದಿಗೆ ತಮ್ಮನ್ನು ತಾದ್ಮಾತ್ಮ್ಯಗೊಳಿಸಿಕೊಂಡು ಪಿಟೀಲನ್ನು ನುಡಿಸುತ್ತಿದ್ದರು. ಇದನ್ನೇ ಸ್ಮರಿಸಿಕೊಳ್ಳುತ್ತಾ ವೆಂಕಟಸುಬ್ಬಯ್ಯನವರು ಪಿಟೀಲನ್ನು ನುಡಿಸುತ್ತಿದ್ದರು. ಈ ದೃಶ್ಯವನ್ನು ನೋಡಿದ ಮನೆಯವರು ಆತ ಭಾವುಕರಾಗಿದ್ದಾರೆಂದು ತಿಳಿದರು.

ಇದೇ ಅವಧಿಯಲ್ಲೇ ವೆಂಕಟಸುಬ್ಬಯ್ಯನವರ ಸಂಬಂಧಿಕರೊಬ್ಬರ ಮದುವೆ ನಡೆಯಲಿದ್ದಿತು. ಈ ಸಮಾರಂಭಕ್ಕಾಗಿ ವೆಂಕಟಸುಬ್ಬಯ್ಯನವರ ಉಳಿದ ಹೆಣ್ಣುಮಕ್ಕಳೂ ಮತ್ತು ಅವರ ಸಂಸಾರವೂ ಬಂದು ಸೇರಿದ್ದರು. ಅಂದು ರಾತ್ರಿ ಎಲ್ಲರೂ ಕುಳಿತಿರುವಾಗ ಇದ್ದಕ್ಕಿದ್ದಂತೆ ವೆಂಕಟಸುಬ್ಬಯ್ಯನವರು "ನಾಳೆ ನಾನು ಸಾಯುತ್ತೇನೆ" ಎಂದು ನುಡಿದರು. ದಿಢೀರನೆ ಹೀಗೆ ನುಡಿದ ವೆಂಕಟಸುಬ್ಬಯ್ಯನವರ ಮಾತು ಕೇಳಿದ ಮನೆಯವರಿಗೆಲ್ಲ ಕಳವಳವಾದರೂ ಹೊರಗೆ ತೋರಿಸಿಕೊಳ್ಳಲಿಲ್ಲ. ಅಲ್ಲದೆ ಆ ಹಿರಿಯರ ಮನಃಸ್ಥಿತಿ ಸರಿಯಿಲ್ಲವೇನೋ ಎಂದುಕೊಂಡರು. ಆದರೆ ಮರುದಿನ ಬೆಳಿಗ್ಗೆಯೇ ವೆಂಕಟಸುಬ್ಬಯ್ಯನವರಿಗೆ ಚಳಿ ಜ್ವರ ಕಾಣಿಸಿಕೊಂಡಿತು. ನಿಶ್ಶಕ್ತಿಯಿಂದಾಗಿ ಸಂಕಟಪಡಲಾರಂಭಿಸಿದರು. ಗಾಬರಿಗೊಂಡ ಮಕ್ಕಳು, ಅಳಿಯಂದಿರು ಅವರೆಡೆ ಬಂದು, "ಅಣ್ಣಾ, ಏನಾಗುತ್ತಿದೆ?" ಎಂದು ವಿಚಾರಿಸತೊಡಗಿದರು. ಇದಕ್ಕೆ ಉತ್ತರವಾಗಿ ವೆಂಕಟಸುಬ್ಬಯ್ಯನವರು [illegible]

ನುಡಿದರು. ಅಲ್ಲಿಂದ ಮುಂದೆ ಇನ್ನೆರಡು ದಿನಗಳಷ್ಟೇ ವೆಂಕಟಸುಬ್ಬಯ್ಯನವರ ಭೌತಿಕ ಶರೀರ ಈ ಲೋಕದಲ್ಲಿದ್ದುದು. ಪೂರ್ಣಭಕ್ತಿಯಿಂದ ಮಾಡಿದ ಧ್ಯಾನದಿಂದ ನಾದಪ್ರಿಯನಾದ ಭಗವಂತನು ಸುಪ್ರೀತನಾಗಿದ್ದ. ಅವರ ಕರೆಗೆ ಓಗೊಟ್ಟು ತನ್ನೆಡೆಗೆ ಅವರನ್ನು ಕರೆದೊಯ್ದ. ಅವರು ಕಡೆಯುಸಿರೆಳೆದಂದು ೧೯೬೫ ರ ಮಾರ್ಚಿ ೨೧ನೇ ತಾರೀಖು. ಸುಮಾರು ಎಂಭತ್ತು ವರ್ಷ ಬಾಳಿ ಬದುಕಿದ ಸಂಗೀತ ನಿಧಿಯೊಂದು ಭಗವಂತನ ಪಾದಾರವಿಂದದಲ್ಲಿ ಲೀನವಾಯಿತು.

ಆಲಗೂಡು ವೆಂಕಟಸುಬ್ಬಯ್ಯನವರಂತಹ ನಿಸ್ವಾರ್ಥ ಜೀವಿ, ಸಂಗೀತ ಪ್ರಪಂಚಕ್ಕೊಂದು ಧ್ರುವತಾರೆ. ಅಂತಹವರ ಸಂತತಿ ಅವಿರತವಾಗಿ ಬೆಳೆದು ನಮ್ಮ ಸಂಸ್ಕೃತಿ ಬೆಳಗಲಿ.